ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 6 ಸಂಚಿಕೆ 4 ಏಪ್ರಿಲ್ 2021



ಮೈಸೂರಿನ ಸುತ್ತೂರು ಶ್ರೀಮಠಕ್ಕೆ ಭೇಟಿ ನೀಡಿದ ಈಶಾ ಫೌಂಡೇಷನ್ ಸಂಸ್ಥಾಪಕರಾದ ಶ್ರೀ ಸದ್ಗುರು ಜಗ್ಗಿ ವಾಸುದೇವ್‌ರವರನ್ನು ಪರಮಪೂಜ್ಯ ಜಗದ್ಗುರುಗಳು ಸನ್ಮಾನಿಸಿ ಗೌರವಿಸಿದರು. ಚಿತ್ರದಲ್ಲಿ ಕಿರಿಯ ಶ್ರೀಗಳು, ಚುಂಚನಹಳ್ಳಿ ಶ್ರೀಗಳು ಮತ್ತು ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳಿದ್ದಾರೆ.




ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಜೆಎಸ್ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಆವರಣದಲ್ಲಿ ಸೆಂಟರ್ ಆಫ್ ಎಕ್ಸ್‌ಲೆನ್ಸ್ ಅನ್ನು ಸ್ಥಾಪಿಸಲು ಭಾರತೀಯ ರಬ್ಬರ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಐಆರ್‌ಐನ ಮೈಸೂರಿನ ಆಡಳಿತ ಸಮಿತಿಯ ಅಧ್ಯಕ್ಷರಾದ ಡಾ. ಆರ್. ಮುಖ್ಯೋಪಾಧ್ಯಾಯ ಹಾಗೂ ಡಾ. ಸಿ.ಜಿ. ಬೆಟಸೂರಮಠರವರು ಒಡಂಬಡಿಕೆ ಪತ್ರವನ್ನು ವಿನಿಮಯ ಮಾಡಿಕೊಂಡರು. ಚಿತ್ರದಲ್ಲಿ ಪ್ರೊ. ಎಸ್.ಬಿ. ಕಿವಡೆ, ಶ್ರೀ ರಾಜಗೋಪಾಲಯ್ಯ, ಶ್ರೀ ಈಶ್ವರ ರಾವ್, ಡಾ. ಎಸ್.ಎ. ಧನರಾಜ್, ಪ್ರೊ. ಸಿದ್ದರಾಮಯ್ಯ, ಪ್ರೊ. ಎಂ.ಹೆಚ್. ಧನಂಜಯ, ಡಾ. ಬಿ. ಸುರೇಶ್‌ರವರುಗಳಿದ್ದಾರೆ



ಮೈಸೂರಿನ ಜೆಎಸ್ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನಡೆದ ಪದವೀಧರರ ದಿನಾಚರಣೆಯಲ್ಲಿ ರಾಜೀವ್ ಗಾಂಧಿ ಆರೋಗ್ಯವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್. ಸಚ್ಚಿದಾನಂದ, ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಸುರೀಂದರ್ ಸಿಂಗ್, ಡಾ. ಬಿ. ಮಂಜುನಾಥ್, ಡಾ. ಹೆಚ್. ಬಸವನಗೌಡಪ್ಪ, ಕರ್ನಲ್ ಡಾ. ಎಂ. ದಯಾನಂದ್‌ರವರುಗಳೊಂದಿಗೆ ಪದಕ ಮತ್ತು ಬಹುಮಾನ ವಿಜೇತ ಪುರಸ್ಕೃತರು

## ಸುತ್ತೂರು ಶ್ರೀಮಠಕ್ಕೂ ಶ್ರೀಕ್ಷೇತ್ರ ಧರ್ಮಸ್ಥಳಕ್ಕೂ ಅವಿನಾಭಾವ ಸಂಬಂಧ

ಸುತ್ತೂರು ಶ್ರೀಮಠಕ್ಕೂ ಶ್ರೀಕ್ಷೇತ್ರ ಧರ್ಮಸ್ಥಳಕ್ಕೂ ಅವಿನಾಭಾವವಾದ ಸಂಬಂಧವಿದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಹೇಳಿದರು.

ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ದಿನಾಂಕ 3.3.2021ರಂದು ಪರಮಪೂಜ್ಯ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಗೆ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಮೈಸೂರಿಗೆ ಬಂದಾಗಲೆಲ್ಲ ಸುತ್ತೂರು ಮಠಕ್ಕೆ ಭೇಟಿ ನೀಡುತ್ತೇನೆ. ರಾಜೇಂದ್ರ ಶ್ರೀಗಳೊಂದಿಗೆ ಅತ್ಯಂತ ಆತ್ಮೀಯವಾದ ಪ್ರೀತಿ ಮತ್ತು ಸಂಬಂಧವಿತ್ತು. ಅದು ಇಂದಿನ ಪೂಜ್ಯರೊಂದಿಗೂ ಮುಂದುವರೆದುಕೊಂಡು ಬಂದಿದೆ. ಶ್ರೀಮಠ ಮಾಡುವ ಎಲ್ಲ ಕೆಲಸಗಳು ಮಾದರಿಯಾದಂಥವು. ಈ ಎರಡು ಕ್ಷೇತ್ರಗಳ ಸಂಬಂಧ ಹೀಗೆಯೇ ಬೆಳೆಯಲಿ ಎಂದು ಆಶಿಸಿದರು.

ಪರಮಪೂಜ್ಯ ಜಗದ್ಗುರುಗಳು ಶ್ರೀಮಠ ಮತ್ತು ಧರ್ಮಸ್ಥಳಗಳು ಭೌಗೋಳಿಕವಾಗಿ ಬೇರೆಬೇರೆಯಾಗಿದ್ದರೂ ಮಾನಸಿಕವಾಗಿ ಎರಡು ಒಂದೆಯಾಗಿವೆ. ಹೆಗ್ಗಡೆಯವರು ಜಗತ್ತಿಗೆ ಬೇಕಾದಂತಹ ಶ್ರೇಷ್ಠ ಸಾಧಕರಾಗಿದ್ದಾರೆ. ಸಮಾಜದ ಅಭಿವೃದ್ಧಿಗಾಗಿ ಧರ್ಮಸ್ಥಳ ಮಾಡದೇ ಇರುವ ಕಾರ್ಯಗಳೇ ಇಲ್ಲ ಎನ್ನುವ ಮಾತು ಜನಜನಿತವಾಗಿದೆ. ಮಹಿಳೆಯರು, ಮಕ್ಕಳು ಮತ್ತು ಹಿರಿಯರ ಕಲ್ಯಾಣಕ್ಕೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಅವರ ಎಲ್ಲ ಕಾರ್ಯಗಳಿಗೂ ಶ್ರೀಮತಿ ಹೇಮಾವತಿ ಹೆಗ್ಗಡೆಯವರು ಬೆನ್ನೆಲುಬಾಗಿ ನಿಂತಿದ್ದಾರೆ. ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ಉದಾರವಾದ ಕೊಡುಗೆಯನ್ನು ನೀಡುತ್ತಿದ್ದಾರೆ ಎಂದು ಹೇಳಿದರು.

ಸಚಿವರಾದ ಶ್ರೀ ಸಿ.ಪಿ. ಯೋಗೇಶ್ವರ್‌ರವರು ರಾಜ್ಯದ ಪುರಾತನ ದೇವಸ್ಥಾನಗಳನ್ನು ಪುನರುತ್ಥಾನಗೊಳಿಸುವ ಕಾರ್ಯಕ್ಕೆ ಡಾ. ವೀರೇಂದ್ರ ಹೆಗ್ಗಡೆಯವರು ಮುಂದಾಗಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಸುತ್ತೂರು ಶ್ರೀಗಳು ನನ್ನ ಎಲ್ಲ ಕೆಲಸಗಳಿಗೂ ಮಾರ್ಗದರ್ಶನ ಮತ್ತು ಆಶೀರ್ವಾದ ಮಾಡುತ್ತಿದ್ದಾರೆ ಎಂದು ಹೇಳಿದರು.

ಮೇಯರ್ ಶ್ರೀಮತಿ ರುಕ್ಮಿಣಿ ಮಾದೇಗೌಡರು ಮಾತನಾಡಿ ನಾನು ಮೇಯರ್ ಆದ ನಂತರ ಡಾ. ವೀರೇಂದ್ರ ಹೆಗ್ಗಡೆಯವರು ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ್ದಾರೆ. ನಾನು ಅವರನ್ನು ಹತ್ತಿರದಿಂದ ನೋಡಿರಲಿಲ್ಲ. ಇಂದು ನೋಡಿ ಸಂತೋಷವಾಯಿತು ಎಂದು ಹೇಳಿದರು. ಅವರ ವಿವಾಹದ ಸಂದರ್ಭದಲ್ಲಿ ಪೋಷಕರು ವಿವಾಹದ ಆಹ್ವಾನ ಪತ್ರಿಕೆಯನ್ನು ಧರ್ಮಸ್ಥಳ ಶ್ರೀಕ್ಷೇತ್ರಕ್ಕೆ ಹೋಗಿ ನೀಡಿ ಹೆಗ್ಗಡೆಯವರ ಆಶೀರ್ವಾದ ಪಡೆದು ಬಂದಿದ್ದನ್ನು ಕೃತಜ್ಞತೆಯಿಂದ ಸ್ಮರಿಸಿದರು.

ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎನ್.ಎಸ್. ತಾರಾನಾಥ್, ಡಾ. ಸಿ.ಜಿ. ಬೆಟಸೂರಮಠರವರು ಅಭಿನಂದನಾ ನುಡಿಗಳನ್ನಾಡಿದರು. ಜೆಎಸ್‌ಎಸ್ ಲಲಿತಕಲಾ ವೃಂದದ ಶ್ರೀಮತಿ ರೂಪಾ ರವೀಶ್ ಮತ್ತು ಶ್ರೀಮತಿ ಕೆ.ಜಿ. ವಿನುತಾ ಪ್ರಾರ್ಥಿಸಿದರು. ಜೆಎಸ್‌ಎಸ್ ಎಎಚ್‌ಇಆರ್‌ನ ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್ ಸ್ವಾಗತಿಸಿದರು. ಶ್ರೀ ಎಸ್.ಪಿ. ಮಂಜುನಾಥ್ ವಂದಿಸಿದರು. ಪ್ರೊ. ಕೆ.ಎಸ್. ಸುರೇಶ್ ಕಾರ್ಯಕ್ರಮ ನಿರೂಪಿಸಿದರು. □

## ವೈದ್ಯರಾದವರು ಮಾನವೀಯ ಗುಣಗಳನ್ನು ರೂಢಿಸಿಕೊಳ್ಳಿ

ವೈದ್ಯರಾದವರು ಮಾನವೀಯ ಗುಣಗಳನ್ನು ರೂಢಿಸಿಕೊಳ್ಳಬೇಕು ಎಂದು ರಾಜೀವ್ ಗಾಂಧಿ ಆರೋಗ್ಯವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್. ಸಚ್ಚಿದಾನಂದರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ದಿನಾಂಕ 5.3.2021 ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತಾ

ವಿದೇಶಗಳಲ್ಲಿ ವೈದ್ಯರಿಗೆ ನೀಡಿರುವ ಮನ್ನಣೆಯನ್ನು ಇಲ್ಲಿನ ವೈದ್ಯರೂ ಪಡೆಯುವಂತಾಗಬೇಕು. ಮುಂದಿನ ದಿನಗಳಲ್ಲಿ ಕುಟುಂಬ ವೈದ್ಯರಿಗೆ ಹೆಚ್ಚಿನ ಬೇಡಿಕೆ ಬರಲಿದೆ. ವೈದ್ಯಕೀಯ ಶಿಕ್ಷಣದಲ್ಲಿ ಬದಲಾಗುತ್ತಿರುವ ಪ್ರವೃತ್ತಿ ಗಮನಿಸಿದರೆ ಸನ್ನಿವೇಶವೂ ಬದಲಾಗುತ್ತಿದೆ ಎನಿಸುತ್ತದೆ. ಕೊರೋನಾದಿಂದಾಗಿ ಈಗ ಬಯೋಮೆಡಿಕಲ್ ಸಂಶೋಧನೆಯ ಮಹತ್ವವನ್ನು ಪ್ರತಿಪಾದಿಸಲಾಗಿದೆ. ಇದು ಕಡಿಮೆ ಸಮಯದಲ್ಲಿ ಲಸಿಕೆಯನ್ನು ಅಭಿವೃದ್ಧಿ ಪಡಿಸಲಿದೆ. ಜೆಎಸ್‌ಎಸ್ ಸಂಸ್ಥೆ ದೇಶದಲ್ಲಿ ವೈದ್ಯಕೀಯ ಶಿಕ್ಷಣದ ಗುಣಮಟ್ಟವನ್ನು ಎತ್ತಿಹಿಡಿದು ಜಗತ್ತಿನ ಅತ್ಯುತ್ತಮ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಯಾಗಿ ಬೆಳೆದು ನಿಂತಿದೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ 217 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಡಾ. ಸಿ.ಜಿ. ಬೆಟಸೂರಮಠ 'ಸಾಮರ್ಥ್ಯ' ನಿಯತಕಾಲಿಕೆಯನ್ನು ಬಿಡುಗಡೆಗೊಳಿಸಿದರು. ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್, ಕುಲಪತಿಗಳಾದ ಡಾ. ಸುರೀಂದರ್ ಸಿಂಗ್, ಕುಲಸಚಿವರಾದ ಡಾ. ಬಿ. ಮಂಜುನಾಥ್, ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಕರ್ನಲ್ ಡಾ. ಎಂ. ದಯಾನಂದ್ ಉಪಸ್ಥಿತರಿದ್ದರು. ಡಾ. ಬಿ.ಜೆ. ಸುಭಾಷ್‌ಚಂದ್ರ ಪ್ರತಿಜ್ಞಾವಿಧಿ ಬೋಧಿಸಿದರು. ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪ ಸ್ವಾಗತಿಸಿದರು. ಕು. ನೀಲಾಂಜನಾ ಪ್ರಾರ್ಥಿಸಿದರು. ಡಾ. ಎಂ.ಎನ್. ಸುಮಾ ವಂದಿಸಿದರು. ಡಾ. ಪಿ. ಶಾಸ್ತ್ರಾರಾ ಮತ್ತು ಡಾ. ಪ್ರಜ್ವಲಾ ಕಾರ್ಯಕ್ರಮ ನಿರೂಪಿಸಿದರು.

## ಜ್ಞಾನ ವಾರಿಧಿ ಉಪನ್ಯಾಸ ಮಾಲೆ

### ಕೃತಜ್ಞತಾ ಮನೋಭಾವನೆ ಬಹಳ ಮುಖ್ಯ



ಜೀವನವನ್ನು ಉತ್ತಮವಾಗಿ ರೂಪಿಸಿಕೊಳ್ಳಲು ಕೃತಜ್ಞತಾ ಮನೋಭಾವನೆ ಬಹಳ ಮುಖ್ಯ ಎಂದು ಖ್ಯಾತ ಹಿರಿಯ ವೈದ್ಯರಾದ ಡಾ. ಹೆಚ್. ಬಸವನಗೌಡಪ್ಪ ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ದಿನಾಂಕ 1.3.2021 ರಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ 'ಜ್ಞಾನವಾರಿಧಿ-13' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ 'ಜೀವನ ಶೈಲಿ, ಜೀವನಾವಧಿ ಮತ್ತು ಗುಣಾತ್ಮಕ ಜೀವನ' ವಿಷಯ ಕುರಿತು ಉಪನ್ಯಾಸ ನೀಡುತ್ತಾ ನಮ್ಮ ಜೀವನದ ಶಿಲ್ಪಿಗಳು ನಾವೇ, ಹಾಗಾಗಿ ಅದನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕು. ದೈಹಿಕವಾಗಿ ಮತ್ತು ಮಾನಸಿಕವಾಗಿ ಖಾಯಿಲೆಯಿಲ್ಲದವರು ಮಾತ್ರ ಆರೋಗ್ಯವಂತರು. ದೇಹಕ್ಕೆ ಚಟುವಟಿಕೆಯಿಲ್ಲದಿದ್ದರೆ ನಿಂತ ನೀರಿನಂತಾಗುತ್ತದೆ. ದಿನನಿತ್ಯ ನಾವು ಮಾಡುವ ಮೂವತ್ತು ನಿಮಿಷದ ವ್ಯಾಯಾಮ ನಮ್ಮ ಆರೋಗ್ಯವನ್ನು ಉತ್ತಮವಾಗಿಟ್ಟುಕೊಳ್ಳುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದು ಸಂಶೋಧನೆಗಳಿಂದಲೂ ಸಾಬೀತಾಗಿದೆ. ಇದರಿಂದ ಹೃದ್ರೋಗ ಮತ್ತು ಮಧುಮೇಹದ ನಿಯಂತ್ರಣ ಸಾಧ್ಯ. ಮೂಳೆಗಳು ಗಟ್ಟಿಯಾಗುತ್ತವೆ ಹಾಗೂ ಖಿನ್ನತೆಯಿಂದ ಹೊರಬರಲು ಸಾಧ್ಯವಾಗುತ್ತದೆ. ಆರೋಗ್ಯಕರ ಜೀವನಶೈಲಿಯನ್ನು ಹೊಂದಬೇಕಾದರೆ ಆಹಾರಶೈಲಿಯು ಬದಲಾಗಬೇಕು. ಹಣ್ಣು, ತರಕಾರಿಗಳ ಸೇವನೆ ಹೆಚ್ಚಬೇಕು. ನಿತ್ಯ ಜಂಕ್‌ಫುಡ್‌ಗಳನ್ನು ಸೇವಿಸುವುದು ಒಳ್ಳೆಯದಲ್ಲ. ವಯಸ್ಕರು ಕನಿಷ್ಠ 7ರಿಂದ 8 ಘಂಟೆಗಳವರೆಗೆ ನಿದ್ರಿಸಬೇಕು. ನಿದ್ದೆಗೂ ಒಂದು ಘಂಟೆ ಮೊದಲೇ ಮೊಬೈಲ್ ಮತ್ತು ಟಿವಿ ನೋಡುವುದನ್ನು ನಿಲ್ಲಿಸಬೇಕು. ಆರೋಗ್ಯವಂತ

ದೇಹದಲ್ಲಿ ಆರೋಗ್ಯವಂತ ಮನಸ್ಸಿರುತ್ತದೆ. ಧೂಮಪಾನ ಮತ್ತು ಮದ್ಯಪಾನಗಳಿಂದ ದೂರವಿರಬೇಕು. ಯೋಗ ಮತ್ತು ಧ್ಯಾನ ನಮ್ಮ ನಿತ್ಯಜೀವನದ ಭಾಗಗಳಾಗಬೇಕು. ಸಮಯದ ಹೊಂದಾಣಿಕೆ ಇಲ್ಲದಿರುವುದರಿಂದಲೇ ಒತ್ತಡ ಉಂಟಾಗುತ್ತದೆ. ಹಾಗಾಗಿ ಸಮಯಕ್ಕೆ ತಕ್ಕಂತೆ ನಮ್ಮ ಕೆಲಸಗಳನ್ನು ಹೊಂದಿಸಿಕೊಳ್ಳಬೇಕು. ಅನಗತ್ಯ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು. ಕೆಲಸದ ಮಧ್ಯೆ ಬಿಡುವು ನೀಡಿ ಸಂಗೀತ ಕೇಳಿ, ಸುತ್ತಮುತ್ತಲಿನ ಪರಿಸರವನ್ನು ಆಹ್ಲಾದಿಸಬೇಕು. ಇನ್ನೊಬ್ಬರಿಗೆ ನಮ್ಮ ಕೈಲಾದಷ್ಟು ಸಣ್ಣಸಣ್ಣ ಸಹಾಯಗಳನ್ನು ಮಾಡಬೇಕು. ನಾವು ಮಾಡುವ ಆ ಕೆಲಸ ಅವರ ಹೃದಯವನ್ನು ಗೆಲ್ಲುತ್ತದೆ. ಅವರ ಒಳ್ಳೆಯ ಹಾರೈಕೆ ನಮಗೆ ದೊರೆಯತ್ತದೆ. ಸಹಾಯ ಮಾಡಿದವರಿಗೆ ಧನ್ಯವಾದ ಹೇಳಿ. ಉದ್ಯೋಗದಿಂದ ನಿವೃತ್ತಿಯಾದರೂ ಜೀವನದ ಕಾರ್ಯಚಟುವಟಿಕೆಗಳಿಂದ ಎಂದಿಗೂ ನಿವೃತ್ತಿಯಾಗಬಾರದು. ಇದ್ದುದರಲ್ಲೇ ತೃಪ್ತಿಪಟ್ಟುಕೊಳ್ಳಬೇಕು ಮತ್ತು ಇಂದಿನ ದಿನಕ್ಕಾಗಿ ಬದುಕಬೇಕೆ ಹೊರತು ನಾಳಿನದನ್ನು ಯೋಚಿಸಿ ಭಯಪಡಬಾರದು, ಮನೆಯವರೊಂದಿಗೆ ಉತ್ತಮ ಬಾಂಧ್ಯವಗಳನ್ನು ಹೊಂದಿ, ಆನಂದಮಯವಾದ ಜೀವನ ಸಾಗಿಸಬೇಕು ಎಂದು ಹೇಳಿದರು.

ಆನ್‌ಲೈನ್ ಮೂಲಕ ನಡೆದ ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳು, ಸಾರ್ವಜನಿಕರು ಭಾಗವಹಿಸಿದ್ದರು. ಶ್ರೀ ಡಿ.ಎಂ. ಸಿದ್ಧಲಿಂಗಸ್ವಾಮಿ ಪ್ರಾರ್ಥಿಸಿದರು. ಶ್ರೀ ಆರ್.ಎಸ್. ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

## ಸಮರ್ಪಣಾ ಭಾವದಿಂದ ಸೇವೆ ಮಾಡಬೇಕು



ಸಮರ್ಪಣಾ ಮನೋಭಾವನೆಯಿಂದ ಸೇವೆ ಮಾಡಬೇಕೇ ಹೊರತು ಪ್ರಚಾರಕ್ಕಾಗಿ ಅಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಪ್ರಾಂತದ ಸೇವಾ ಪ್ರಮುಖ್ ಶ್ರೀ ಸುಬ್ರಾಯ ನಂದೋಡಿಯವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ದಿನಾಂಕ 8.3.2021ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ 'ಜ್ಞಾನವಾರಿಧಿ-14' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ 'ಸಮಾಜ ಸೇವೆ' ಕುರಿತು ಉಪನ್ಯಾಸ ನೀಡುತ್ತಾ ಎಲ್ಲ ಸೇವೆಗಳಿಗಿಂತಲೂ ಸಮಾಜ ಸೇವೆ ಭಿನ್ನವಾದದ್ದು. ಇಡೀ ಜಗತ್ತೇ ನನ್ನ ಕುಟುಂಬ ಎಂದು ಭಾವಿಸಬೇಕು. ಭಾರತದಲ್ಲಿ ಸರ್ವಧರ್ಮ ಸಮಭಾವದಿಂದ ಬಾಳುತ್ತಿದ್ದೇವೆ. ಸ್ವಾಮಿ ವಿವೇಕಾನಂದರು ತ್ಯಾಗ ಮತ್ತು ಸೇವೆ ಭರತಖಂಡದ ಎರಡು ಆದರ್ಶಗಳು ಎಂದು ಹೇಳಿದ್ದಾರೆ. ಸೇವಾ ಹೀ ಪರಮೋ ಧರ್ಮ ಎಂಬಂತೆ ಸೇವೆಯನ್ನು ಅತ್ಯಂತ ಶ್ರೇಷ್ಠವಾದ ಕರ್ತವ್ಯ ಎಂದು ತಿಳಿಯಬೇಕು. ಅದನ್ನು ಉಪಕಾರ, ಸಹಾಯ ಮತ್ತು ಸಂಪಾದನೆಗೆ ಇರುವ ಮಾರ್ಗ ಎಂದು ಭಾವಿಸಬಾರದು. ಪ್ರಕೃತಿಯನ್ನು ನೋಡಿ ನಾವು ಸೇವೆಯ ಮನೋಭಾವನೆಯನ್ನು ರೂಢಿಸಿಕೊಳ್ಳಬೇಕು. ಅದು ಪರರಿಗೋಸ್ಕರವೇ ಎಲ್ಲವನ್ನೂ ನೀಡುತ್ತದೆ. ಒಂದು ನದಿ ತಾನು ಹರಿಯುವ ಪ್ರದೇಶಗಳ ಅಕ್ಕಪಕ್ಕದ ಕೃಷಿ ಭೂಮಿ ಮತ್ತು ಗ್ರಾಮಗಳಿಗೆ ಹೇಗೆ ಯಾವ ಪ್ರತಿಫಲವನ್ನೂ ಬಯಸದೇ ನೀರನ್ನು ನೀಡುತ್ತಾ ಹೋಗುತ್ತದೆಯೋ ಆ ರೀತಿಯ ಸೇವೆಯಲ್ಲಿ ನಾವು ತೊಡಗಬೇಕು. ಪರೋಪಕಾರ ಮಾಡುವಂಥದ್ದು ನಮ್ಮೆಲ್ಲರ ಕರ್ತವ್ಯವಾಗಬೇಕು. ವ್ಯಕ್ತಿ ಬಾಲ್ಯದಿಂದಲೇ ಸಂಸ್ಕಾರಗಳನ್ನು ರೂಢಿಸಿಕೊಂಡರೆ ಯೌವನದಲ್ಲಿ ದಾರಿ ತಪ್ಪುವುದಿಲ್ಲ. ಇಂದು ಮಠ-ಮಂದಿರಗಳು, ಸಂಘ-ಸಂಸ್ಥೆಗಳು ಸಂಸ್ಕಾರವನ್ನು ನೀಡುವ ಕೆಲಸವನ್ನು

ಮಾಡುತ್ತಿವೆ. ಸಮಾಜದಲ್ಲಿ ಸಚ್ಚಾರಿತ್ರ ವ್ಯಕ್ತಿಗಳ ಸಂಖ್ಯೆ ಹೆಚ್ಚುವುದರಿಂದ ಬಲಿಷ್ಠ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆ. ಜವಾಬ್ದಾರಿಯ ಅರಿವನ್ನು ಸಮಾಜದಲ್ಲಿ ಮೂಡಿಸಬೇಕು. ಸಮಾಜವನ್ನು ಪ್ರೀತಿಸಬೇಕು. ಯಾವುದೇ ಭೇದ–ಭಾವವಿಲ್ಲದೇ ಸೇವೆ ಮಾಡಬೇಕು. ಕೊರೋನಾ ಸಂದರ್ಭದಲ್ಲಿ ಅನೇಕ ಸಂಘ–ಸಂಸ್ಥೆಗಳು ತಮ್ಮ ಪ್ರಾಣದ ಹಂಗನ್ನು ತೊರೆದು ಸೇವೆಯನ್ನು ಮಾಡಿವೆ. ಸೇವೆಯನ್ನು ಮಾಡುವುದರಿಂದ ಸ್ಪಂದನೆ, ಪರಹಿತ ಚಿಂತನೆ, ಕೊಡುವ ಮನೋಭಾವ, ನಾಯಕತ್ವ, ಸಮರ್ಪಣ ಮನೋಭಾವದಂತಹ ಗುಣಗಳು ನಮ್ಮಲ್ಲಿ ಬೆಳೆಯುತ್ತವೆ ಎಂದು ತಿಳಿಸಿದರು.

ಶ್ರೀ ಡಿ.ಎಂ. ಸಿದ್ಧಲಿಂಗಸ್ವಾಮಿ ಪ್ರಾರ್ಥಿಸಿದರು. ಡಾ. ಪ್ರಭುಸ್ವಾಮಿ ಕಟ್ನವಾಡಿ ಕಾರ್ಯಕ್ರಮ ನಿರ್ವಹಿಸಿದರು.

## ಸ್ವಕೀರ್ತಿಯನ್ನು ಅಪೇಕ್ಷಿಸದೆ ಸಮಾಜವನ್ನು ಬೆಳೆಸುವುದೇ ನಿಜವಾದ ನಾಯಕತ್ವ



ಸ್ವಕೀರ್ತಿಯನ್ನು ಅಪೇಕ್ಷಿಸದೆ ಸಮಾಜವನ್ನು ಬೆಳೆಸುವುದೇ ನಿಜವಾದ ನಾಯಕತ್ವ ಎಂದು ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್ ಸಂಸ್ಥಾಪಕರಾದ ಡಾ. ಆರ್. ಬಾಲಸುಬ್ರಹ್ಮಣ್ಯಂರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ದಿನಾಂಕ 15.3.2021 ರಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ 'ಜ್ಞಾನವಾರಿಧಿ–15' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ 'ಸೇವಾ ಕಾರ್ಯದಲ್ಲಿ ನಾಯಕತ್ವ' ಕುರಿತು ಉಪನ್ಯಾಸ ನೀಡುತ್ತಾ ಸಮಾಜದಲ್ಲಿನ ಒಬ್ಬ ಮನುಷ್ಯನಿಗೆ ಆ ಕ್ಷಣಕ್ಕೆ ಅಗತ್ಯವಿರುವ ಅವಶ್ಯಕತೆಯನ್ನು ಪೂರೈಸುವುದೇ ನಿಜವಾದ ನಾಯಕತ್ವ. ನಾಯಕತ್ವದ ಪಯಣ ಜೀವನದ ಆಳವಾದ ಗುರಿಯಿಂದ ಪ್ರಾರಂಭವಾಗುತ್ತದೆ. ಯಾವ ವ್ಯಕ್ತಿ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಾನೋ ಅವನು ನಿಜವಾದ ನಾಯಕ. ಹೃದಯದಿಂದ ಸೇವೆಯನ್ನು ಸಲ್ಲಿಸಬೇಕು. ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದವರ ಕಾಳಜಿಗೆ ಸೇವೆಯ ಭಾವನೆ ಉಕ್ಕಬೇಕು. ಸೇವೆ ಸಲ್ಲಿಸಲು ಭಾವಿಸುವುದು ಮತ್ತು ಚಿಂತಿಸುವುದರ ಜೊತೆಗೆ ಅದನ್ನು ಕ್ರಿಯಾರೂಪಕ್ಕೆ ತರಬೇಕು. ಇನ್ನೊಬ್ಬರಿಗೆ ಸೇವೆಯನ್ನು ಮಾಡಲು ಸ್ಫೂರ್ತಿ ತುಂಬಬೇಕು. ನನಗೆ ಸೇರಿದ್ದು, ನನ್ನದು ಎಂಬ ಭಾವನೆ ನಾಯಕತ್ವದಲ್ಲಿ ಬರಲೇಬಾರದು. ನನ್ನ ಮುಖಾಂತರ ಸೇವೆಯನ್ನು ಮಾಡಿಸಲಾಗುತ್ತಿದೆ ಎಂದು ಭಾವಿಸಬೇಕು. ಮೊದಲು ನಾನು ಯಾರು ಎಂಬುದನ್ನು ಅರಿತುಕೊಳ್ಳಬೇಕು. ಸುತ್ತಮುತ್ತಲು ಇರುವವರನ್ನು ಅರಿತುಕೊಳ್ಳಬೇಕು. ನಂತರ ನನ್ನನ್ನು ಮತ್ತು ಸುತ್ತಮುತ್ತಲು ಇರುವವರನ್ನು ಜೋಡಿಸುವ ಕ್ರಿಯೆಯನ್ನು ಅರ್ಥ ಮಾಡಿಕೊಳ್ಳುವುದು ನಿಜವಾದ ನಾಯಕತ್ವ. ಇದು ಭಾರತೀಯ ಸಂಸ್ಕೃತಿ ಆಧಾರಿತ ನಾಯಕತ್ವ. ನಾಯಕತ್ವ ಎಂಬುದು ಒಂದು ಅದ್ಭುತ ಆಧ್ಯಾತ್ಮಿಕ ಪಯಣ. ಇದರಲ್ಲಿ ಕೆಲಸದ ಬಗ್ಗೆ ಆಳವಾದ ವಿಶ್ವಾಸ, ಶ್ರದ್ಧೆ, ಆಶಾವಾದಿತನ, ಸಕಾರಾತ್ಮಕ ಚಿಂತನೆ ಇರಬೇಕಾದುದು ಅತೀ ಅವಶ್ಯಕ ಎಂದು ತಿಳಿಸಿದರು.

ಶ್ರೀ ಸುರೇಶ್ ಪ್ರಾರ್ಥಿಸಿದರು. ಡಾ. ಬಿ. ಸುದೀಪ್ ಕಾರ್ಯಕ್ರಮ ನಿರ್ವಹಿಸಿದರು.

## ಕನ್ನಡ ಪ್ರೇಮವನ್ನು ಉದ್ದೀಪನಗೊಳಿಸುವ ಮಹತ್ತರ ಜವಾಬ್ದಾರಿ ಶಿಕ್ಷಕರ ಮೇಲಿದೆ



ಕನ್ನಡ ಪ್ರೇಮವನ್ನು ಉದ್ದೀಪನಗೊಳಿಸುವ ಮಹತ್ತರ ಜವಾಬ್ದಾರಿ ಶಿಕ್ಷಕರುಗಳ ಮೇಲಿದೆ ಎಂದು ಲೇಖಕರಾದ ಡಾ. ಬಿ. ಪ್ರಭಾಕರ ಶಿಶಿಲರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ದಿನಾಂಕ 22.3.2021 ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ 'ಜ್ಞಾನವಾರಿಧಿ–16' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ 'ಕ್ಷೀಣಿಸಬಾರದು ಕನ್ನಡ ಪ್ರೀತಿ' ಕುರಿತು ಉಪನ್ಯಾಸ ನೀಡುತ್ತಾ ಪ್ರಾದೇಶಿಕ ಭಾಷೆಗಳನ್ನೇ ನಾವು ಸಾಹಿತ್ಯ ರಚನೆಯಲ್ಲಿ ಬಳಸಬೇಕು. ನಾವು ಬಳಸುತ್ತಿರುವ ಕನ್ನಡದಲ್ಲಿ ಉಚ್ಚಾರ ದೋಷಗಳಿವೆ. ಶಬ್ದ ಸಂಪತ್ತಿನ ಕೊರತೆಯಿದೆ. ಕರ್ನಾಟಕದಲ್ಲಿ ಒಂದೊಂದು ಪ್ರಾಂತ್ಯಕ್ಕೆ ಒಂದೊಂದು ಕನ್ನಡ ಭಾಷೆಯಿದೆ. ಇಂಗ್ಲಿಷ್ ಮೋಹದಿಂದ ಅನೇಕ ಕನ್ನಡ ಪ್ರತಿಭೆಗಳು ಮುರುಟಿ ಹೋಗುತ್ತಿವೆ. ಬ್ರಿಟಿಷರು ಭಾರತವನ್ನು ದಾಸ್ಯದಲ್ಲಿಡಲು ಇಂಗ್ಲಿಷನ್ನು ಬಿಟ್ಟುಹೋದರು. ಪ್ರಾಂತೀಯ ಭಾಷೆಯಲ್ಲಿ ಶಿಕ್ಷಣವನ್ನು ನೀಡಲು ಪ್ರಯತ್ನಿಸಬೇಕು. ಇಂದು ಸರ್ಕಾರಿ ಶಾಲೆಗಳು ಮುಚ್ಚುತ್ತಿವೆ. ಕನ್ನಡದ ಸ್ಥಿತಿ ಶೋಚನಿಯವಾಗುತ್ತಿದೆ. ಇದಕ್ಕೆ ಕಾರಣ ಪೋಷಕರು ಮತ್ತು ನಮ್ಮನ್ನಾಳುವವರ ಇಂಗ್ಲಿಷ್ ವ್ಯಾಮೋಹವೇ ಕಾರಣ. ಒತ್ತಾಯಪೂರ್ವಕವಾಗಿ ಇಂಗ್ಲಿಷನ್ನು ಮಕ್ಕಳ ಮೇಲೆ ಹೇರಲಾಗುತ್ತಿದೆ. ಇದರಿಂದ ಕನ್ನಡ ದುರ್ಬಲವಾಗುತ್ತಾ ಸಾಗುತ್ತಿದೆ. ಶಾಲಾ–ಕಾಲೇಜುಗಳಲ್ಲಿ ಸಾಹಿತ್ಯ ಸಂಘಗಳು ವರದಿಗೆ ಮಾತ್ರ ಸೀಮಿತವಾಗಿವೆ. ಕನ್ನಡದಲ್ಲಿ ಪಿಎಚ್‌ಡಿ ಮಾಡಿದ ಎಷ್ಟೋ ಮಂದಿಗೆ ಕುಮಾರವ್ಯಾಸನ ಒಂದು ಷಟ್ಪದಿಯನ್ನೂ ಬಿಡಿಸಿ ಹೇಳಲು ಬರುವುದಿಲ್ಲ. ನೆರೆ ರಾಜ್ಯಗಳು ಕನ್ನಡದ ಮೇಲೆ ಆಕ್ರಮಣ ಮಾಡುತ್ತಿವೆ. ಸರ್ಕಾರಕ್ಕೆ ಗಡಿಗಳ ಗೊಂದಲವನ್ನು ಪರಿಹರಿಸಲು ಸಾಧ್ಯವಾಗುತ್ತಿಲ್ಲ. ನಮ್ಮಲ್ಲಿ ಇಂಗ್ಲಿಷ್ ಅರ್ಥವಾಗುವುದಿಲ್ಲ ಎಂಬ ಕಾರಣಕ್ಕೆ ಕನ್ನಡವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡುವ ವಿದ್ಯಾರ್ಥಿಗಳಿದ್ದಾರೆ. ಇಂಥವರಿಂದ ಕನ್ನಡ ಬೆಳವಣಿಗೆ ಹೊಂದಲು ಸಾಧ್ಯವಿಲ್ಲ. ಕನ್ನಡವನ್ನು ಪ್ರೀತಿಯಿಂದ ಕಲಿಯಬೇಕು. ಸರ್ಕಾರ ಕನ್ನಡದ ಬಗೆಗಿನ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು ಎಂದು ತಿಳಿಸಿದರು.

ಶ್ರೀಮತಿ ಸುಮಂಗಲಾ ಜಂಗಮಶೆಟ್ಟಿ ಪ್ರಾರ್ಥಿಸಿದರು. ಡಾ. ಮಹೇಂದ್ರಮೂರ್ತಿ ಕಾರ್ಯಕ್ರಮ ನಿರ್ವಹಿಸಿದರು.

## ಯಾರ ಜೀವನ ಇನ್ನೊಬ್ಬರಿಗೆ ಆದರ್ಶವಾಗುವುದೋ ಅದೇ ಸಾರ್ಥಕ ಬದುಕು

ಯಾರ ಜೀವನ ಇನ್ನೊಬ್ಬರಿಗೆ ಆದರ್ಶವಾಗುವುದೋ ಅದೇ ಸಾರ್ಥಕ ಬದುಕು ಎಂದು ಕನಕಗಿರಿ ಶ್ರೀ ಸುವರ್ಣಗಿರಿ ಸಂಸ್ಥಾನ ವಿರಕ್ತಮಠದ ಡಾ. ಶ್ರೀ ಚೆನ್ನಮಲ್ಲ ಸ್ವಾಮಿಗಳವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ದಿನಾಂಕ 29.3.2021 ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ 'ಜ್ಞಾನವಾರಿಧಿ–17' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ 'ಬದುಕಿನ ಸಾರ್ಥಕತೆ' ಕುರಿತು ಉಪನ್ಯಾಸ ನೀಡುತ್ತಾ ಹುಟ್ಟು ಮತ್ತು ಸಾವುಗಳ ನಡುವೆ ಇರುವಂಥದ್ದೆ ಬದುಕು. ಹುಟ್ಟು ಮತ್ತು ಸಾವುಗಳು



ನಾವು ನಿರ್ಧರಿಸಿದವುಗಳಲ್ಲ, ಅವು ಅನಿಶ್ಚಿತವಾದವು. ಬದುಕು ಎಂದರೆ ಎಲ್ಲಿ ಸಿಹಿ ಇರುತ್ತದೊ ಅದನ್ನು ತಂದು ಎಲ್ಲರೊಂದಿಗೆ ಹಂಚಿಕೊಳ್ಳುವುದು. ಭಗವಂತ ನಮಗಾಗಿ ಎಲ್ಲವನ್ನೂ ಕೊಟ್ಟಿದ್ದಾನೆ. ಆತನಿಗೆ ಕೃತಜ್ಞತೆ ಸಲ್ಲಿಸಿ ಸ್ಮರಣೆ ಮಾಡುವುದು ನಿಜವಾದ ಬದುಕು. ಮತಿಯೊಳಗೆ ಹುಟ್ಟುವ ಕಲ್ಮಶಗಳನ್ನು ತೊಳೆದು ಸ್ವಚ್ಛವಾದ ಬದುಕಿನಿಂದ ಭಗಂತನನ್ನು ಸೇರಬೇಕು. ಈ ಬದುಕು ನಶ್ವರ ಮತ್ತು ಕ್ಷಣಿಕ. ಉನ್ನತ ಹುದ್ದೆ ಮತ್ತು ಅಂತಸ್ತನ್ನು ಗಳಿಸುವುದೇ ಸಾರ್ಥಕವಾದ ಬದುಕಲ್ಲ. ಸಾರ್ಥಕತೆ ಇರುವುದು ನಿರಂತರವಾದ ಜೀವನದ ನಡೆನುಡಿಯಲ್ಲಿದೆ. ಬದುಕನ್ನು ವ್ಯರ್ಥಮಾಡದೆ ಸಾಧನೆ-ಸಿದ್ಧಿಗಾಗಿ ಮುಡಿಪಾಗಿಡಬೇಕು. ಆಗ ಈ ಬದುಕು ಸಾರ್ಥಕವಾಗುತ್ತದೆ. ನಿಸರ್ಗದ ಎಲ್ಲ ವಸ್ತುಗಳು ಅವುಗಳ ಬದುಕಿಗೆ ಭಗವಂತ ಕೊಟ್ಟ ರೂಪದಂತೆ ಬದುಕುತ್ತವೆ. ಆದರೆ ಮನುಷ್ಯ ತನ್ನದಲ್ಲದ್ದಕ್ಕೆ ಹಾತೊರೆದು ಬೇರೊಬ್ಬರನ್ನು ಅನುಕರಣೆ ಮಾಡಲು ಹೋಗಿ ತನ್ನ ಬದುಕನ್ನು ಹಾಳುಮಾಡಿಕೊಳ್ಳುತ್ತಿದ್ದಾನೆ. ಮನಸ್ಸಿನಲ್ಲಿ ಅಂತಃಕರಣದ ಪ್ರೀತಿಯಿದ್ದವರಿಗೆ ಬದುಕಿನ ಸಾರ್ಥಕತೆಯ ದಾರಿ ಗೊತ್ತಿರುತ್ತದೆ. ಎಲ್ಲರೂ ನನ್ನವರು ಎನ್ನುವ ಭಾವನೆಯಲ್ಲಿ ಬದುಕಬೇಕು. ಯಾವ ಧರ್ಮದ ಮೂಲ ದಯೆಯಾಗಿರುತ್ತದೆಯೋ ಆ ಧರ್ಮವನ್ನು ನಾವೆಲ್ಲ ಪಾಲಿಸಿದರೆ ಈ ಬದುಕಿಗೆ ಸಾರ್ಥಕತೆ ಬರುತ್ತದೆ. ಸಂತರು ಮತ್ತು ಶರಣರು ಬದುಕಿನ ಮಹತ್ವವನ್ನು ತೋರಿಸಿಕೊಟ್ಟಿದ್ದಾರೆ. ಶ್ರೀ ಶಿವರಾತ್ರೀಶ್ವರರು, ರಾಜೇಂದ್ರ ಶ್ರೀಗಳು ಈ ಸಮಾಜಕ್ಕಾಗಿಯೆ ಬದುಕಿದವರು. ಬದುಕುವ ರೀತಿಯನ್ನು ಇಂತಹ ಮಹಾತ್ಮರಿಂದ ಕಲಿಯಬೇಕು. ಬದುಕು ಸಂಕುಚಿತವಾಗದೇ ಹೃದಯ ಶ್ರೀಮಂತಿಕೆಯಿಂದ ಕೂಡಿರಬೇಕು ಎಂದು ತಿಳಿಸಿದರು.

ಶ್ರೀಮತಿ ಕೆ.ಜಿ. ವಿನುತಾ ಪ್ರಾರ್ಥಿಸಿದರು. ಶ್ರೀ ಆರ್.ಎಸ್. ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

## ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಪ್ರವಚನ

### ಜೀವನದಲ್ಲಿ ಪರಸ್ಪರ ಹೋಲಿಕೆ ಬಿಡಬೇಕು

ಜೀವನದಲ್ಲಿ ಪರಸ್ಪರ ಹೋಲಿಕೆಯನ್ನು ಬಿಟ್ಟಾಗ ಮನಸ್ಸು ಶಾಂತ ಹಾಗೂ ಸ್ವಚ್ಛವಾಗಿರಲು ಸಾಧ್ಯ ಎಂದು ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ತಿಳಿಸಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 7.3.2021ರಂದು ಪ್ರವಚನ ನೀಡುತ್ತಾ ಅಲ್ಲಮಪ್ರಭುದೇವರು ಹೇಳುವಂತೆ "ನಾನು ಎಂಬುದು ಪ್ರಮಾಣ, ನೀನು ಎಂಬುದು ಪ್ರಮಾಣ, ಸ್ವಯಂ ಎಂಬುದು ಪ್ರಮಾಣ, ಪರ ಎಂಬುದು ಪ್ರಮಾಣ, ಪ್ರಮಾಣ ಎಂಬುದು ಪ್ರಮಾಣ ಗುಹೇಶ್ವರ ಅಪ್ರಮಾಣ ನೋಡ" ಎನ್ನುವಂತೆ ಪ್ರತಿಯೊಬ್ಬರ ಹೃದಯವೆಂಬ ಗುಹೆಯಲ್ಲಿ ಸಂತೋಷ, ಪ್ರೀತಿ, ಮಮತೆ ತುಂಬಿದೆ. ಪರಸ್ಪರ ಹೋಲಿಕೆಯನ್ನು ತ್ಯಜಿಸಿದಾಗ ಇದನ್ನು ಅನುಭವಿಸಬಹುದು. ಅತಿಯಾದ ಹೋಲಿಸುವಿಕೆಯಿಂದ ಮನುಷ್ಯ ತನ್ನ ಜೀವನದಲ್ಲಿ ನೆಮ್ಮದಿ ಮತ್ತು ಶಾಂತಿಯನ್ನು ಕಳೆದುಕೊಂಡು ಸಂಕಷ್ಟಕ್ಕೊಳಪಡುತ್ತಾನೆ. ಪ್ರತಿಯೊಬ್ಬರ ಹೃದಯ ಹಾಗೂ ಪ್ರತಿಯೊಂದು ವಸ್ತುವಿನಲ್ಲಿ ಸರ್ವವ್ಯಾಪಿಯಾದ ಒಂದು ಅತೀಂದ್ರಿಯ ಶಕ್ತಿ ಅಡಗಿರುತ್ತದೆ, ಅದು ಅಪ್ರಮಾಣವಾಗಿರುತ್ತದೆ. ಆತ್ಮವನ್ನು ಹೋಲಿಕೆ ಮಾಡಲು ಸಾಧ್ಯವಿಲ್ಲ. ಕಾರಣ ಅದು ಗುಣಗಳನ್ನು ಹೊಂದಿಲ್ಲ. ನಾವು ಗುಣಗಳೊಂದಿಗೆ ಹೋಲಿಕೆ ಮಾಡುತ್ತೇವೆ. ಹೋಲಿಕೆಗೆ ಗುಣಗಳ ಅಗತ್ಯವಿದೆ. ಎಲ್ಲಿ ಗುಣಗಳು

ಇಲ್ಲವೋ ಅಲ್ಲಿ ಎರಡು ವಸ್ತುಗಳನ್ನು ಹೋಲಿಕೆ ಮಾಡಲು ಸಾಧ್ಯವಿಲ್ಲ. ಮನುಷ್ಯ ಮನಸ್ಸನ್ನು ಹೊಂದಿದ್ದು, ದೈಹಿಕವಾಗಿ ಮತ್ತು ಮಾನಸಿಕವಾಗಿ ಅದನ್ನು ಅನುಭವಿಸುತ್ತಾನೆ. ತನ್ನಲ್ಲಿರುವ ಆತ್ಮದ ಅರಿವನ್ನು ಮರೆಯದೇ ಅನುಭವಿಸಿದಾಗ ಆತ್ಮಸಾಕ್ಷಾತ್ಕಾರ ಪಡೆಯಬಹುದು. ಎಲ್ಲಿ ಭಾವನೆಗಳೊಂದಿಗೆ ಹಾಗೂ ವಿಚಾರಗಳೊಂದಿಗೆ ಹೋಲಿಕೆ ಮಾಡಲು ಸಾಧ್ಯತೆ ಇದೆಯೋ ಅಲ್ಲಿ ಸಂತೋಷ ಮತ್ತು ಅಸಂತೋಷ ಎರಡು ಕಾಣಲು ಸಾಧ್ಯ, ಅದುವೇ ಸಂಸಾರ. ಈ ಸಂಸಾರದ ಜಡತ್ವದಿಂದ ಹೊರಬರಲು ವಿಚಾರ, ಭಾವನೆ, ನೆನಪುಗಳು, ನಾನು, ನೀನು, ನನ್ನದು, ನಿನ್ನದು ಎನ್ನುವ ಹೋಲಿಕೆಯ ಗುಣಗಳಿಂದ ದೂರವಿದ್ದಾಗ ಶಾಂತಿ ಹಾಗೂ ಸುಮನಸ್ಸನ್ನು ಹೊಂದಬಹುದು ಎಂದು ತಿಳಿಸಿದರು.

## ಪ್ರಕೃತಿ ಸಂಗದಿಂದ ಮನುಷ್ಯ ಶ್ರೀಮಂತನಾಗುತ್ತಾನೆ

ಪ್ರಕೃತಿಯಲ್ಲಿ ಅದ್ಭುತವಾದ ಸೌಂದರ್ಯ ಇದೆ, ಅದನ್ನು ಒಳ್ಳೆಯ ಮನಸ್ಸಿನಿಂದ ಅನುಭವಿಸಿದಾಗ ಮನುಷ್ಯ ಶ್ರೀಮಂತನಾಗಲು ಸಾಧ್ಯ ಎಂದು ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ತಿಳಿಸಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 14.3.2021ರಂದು ಪ್ರವಚನ ನೀಡುತ್ತಾ ಈ ಜಗತ್ತು ಸುಂದರವಾದದ್ದು. ಇಲ್ಲಿರುವ ಹೂವು–ಗಿಡ–ಮರ–ಬಳ್ಳಿಗಳಿಗೆ ಬಣ್ಣ ಹಾಗೂ ಸುವಾಸನೆಗಳಿರುವುದು ಪ್ರಕೃತಿಯ ಅದ್ಭುತ. ಮನುಷ್ಯನಿಂದ ಇದನ್ನು ಸೃಷ್ಟಿಸಲು ಸಾಧ್ಯವಿಲ್ಲ. ಪ್ರಕೃತಿಯ ಅದ್ಭುತಗಳನ್ನು ಜೀವನದಲ್ಲಿ ತಿಳಿಯಲೇಬೇಕು. ಪ್ರಕೃತಿ ಸೌಂದರ್ಯವಿಲ್ಲದ ಜೀವನ ಊಹಿಸಲು ಅಸಾಧ್ಯ. ನೂರಾರು ವರ್ಷಗಳ ಸುಂದರ ಜೀವನ ನಡೆಸಲು ಪ್ರಕೃತಿಯ ಸೌಂದರ್ಯವನ್ನು ಅನುಭವಿಸಲು ಅದರ ಸಂಗ ಮಾಡಬೇಕು. ಕಾಳಿದಾಸ ಹಾಗೂ ವರ್ಡ್ಸ್‌ವರ್ತ್ ಕವಿಗಳು ಪ್ರಕೃತಿಯ ಆರಾಧಕರು. ಇವರು ವಿಶ್ವದ ಪ್ರಕೃತಿಯ ಅದ್ಭುತ ಸೌಂದರ್ಯವನ್ನು ತಮ್ಮದೇ ಆದ ಪದಗಳಲ್ಲಿ ಹಿಡಿದಿಡಲು ಪ್ರಯತ್ನಿಸಿದರು. ಈ ಸುಂದರ ಜಗತ್ತಿನಲ್ಲಿ ಜೀವಿಸಿರುವುದೇ ಒಂದು ಸುವರ್ಣಾವಕಾಶ, ಅದನ್ನು ಕಳೆದುಕೊಳ್ಳದೆ, ಆಯಾಸಗೊಳ್ಳದೆ ನಿರಂತರವಾಗಿ ಕಾರ್ಯಪ್ರವೃತ್ತನಾಗಿರಬೇಕು. ಪ್ರಕೃತಿಯಲ್ಲಿರುವ ವಸ್ತುವಿನ ಒಡೆಯನಾಗದೆ, ಆ ವಸ್ತುವಿನಲ್ಲಿರುವ ಸುಂದರತೆಯನ್ನು ಯಾವುದೇ ವ್ಯಾಮೋಹಕ್ಕೆ ಒಳಗಾಗದೆ ಸಂತೋಷದಿಂದ ಅನುಭವಿಸುವಂತಿರಬೇಕು. ಭಾವನೆಯಿಂದ ಬೇಸರಗೊಳ್ಳದೆ, ಒಳ್ಳೆಯ ಆಲೋಚನೆ ಮತ್ತು ನೆನಪಿನಲ್ಲಿರುವಂತೆ ನಾವು ಬದುಕಬೇಕು. ಅಪಾರ ಸಂಪತ್ತು ಹೊಂದಿದ್ದರೂ ನೋಡಲಿಕ್ಕೆ ಕಣ್ಣು ಮತ್ತು ಕೇಳಲಿಕ್ಕೆ ಕಿವಿಗಳು ಇಲ್ಲದೆ ಹೋದರೆ ಅದು ವ್ಯರ್ಥ. ಸಂಪತ್ತು ನಮ್ಮ ಜೀವನವನ್ನು ಉತ್ಕೃಷ್ಟಗೊಳಿಸುವುದಿಲ್ಲ. ಆದರೆ ಜಗತ್ತಿನ ಸೌಂದರ್ಯ ಜೀವನವನ್ನು ಸುಂದರಗೊಳಿಸುತ್ತದೆ ಎಂದು ತಿಳಿಸಿದರು.

## ಪ್ರಕೃತಿಯ ಅನುಭೂತಿಯಿಂದ ದೈವತ್ವದೆಡೆಗೆ

ಪ್ರಕೃತಿಯಲ್ಲಿರುವ ಪ್ರತಿಯೊಂದು ಜಡ ಹಾಗೂ ಜೀವಿಯೂ ಒಂದು ದಿನ ಮರೆಯಾಗುತ್ತವೆ, ಆದರೆ ಜೀವಸತ್ವ ಮತ್ತು ದೈವತ್ವ ಚಿರಾಯು. ಈ ತತ್ವವನ್ನು ಪಕೃತಿಯ ಅನುಭೂತಿಯಿಂದ ಚಿಂತಿಸಿದಾಗ ದೈವತ್ವ ಪಡೆಯಲು ಸಾಧ್ಯ ಎಂದು ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ತಿಳಿಸಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 21.3.2021ರಂದು ಪ್ರವಚನ ನೀಡುತ್ತಾ ಪ್ರಕೃತಿಯಲ್ಲಿ ಅಸಂಖ್ಯಾತ ವಸ್ತುಗಳು ಇವೆ. ಆದರೆ ಅವುಗಳು ಸದಾಕಾಲ ಇರಲು ಸಾಧ್ಯವಿಲ್ಲ. ಪ್ರತಿಕ್ಷಣ ಗ್ಯಾಲಕ್ಸಿಯಿಂದ ಹಿಡಿದು ಅಣುವಿನಲ್ಲಿ ಚಲನೆಯನ್ನು ಕಾಣುತ್ತೇವೆ. ಅದು ಜಗತ್ತಿನ ಪ್ರಮಾಣ. ಇಲ್ಲಿರುವ ಯಾವುದೇ ವಸ್ತುವನ್ನು ಮನುಷ್ಯ ನಿರ್ಮಿಸಲು

ಸಾಧ್ಯವಿಲ್ಲ. ಭೂಮಿ, ಸೂರ್ಯ, ಚಂದ್ರ, ವಿಶ್ವಸಮೇತ ಒಂದು ದಿನ ಕಣ್ಮರೆಯಾಗುತ್ತವೆ. ಈ ವಿಶ್ವದಲ್ಲಿ ವಾಸಿಸುತ್ತಿರುವ ಮನುಷ್ಯ ಎಷ್ಟೆ ಬುದ್ಧಿವಂತ, ಶಕ್ತಿವಂತ ಮತ್ತು ಸೌಂದರ್ಯವುಳ್ಳವನಾಗಿದ್ದರೂ ಕೊನೆಗೊಂದು ದಿನ ಅದು ವಿಶ್ವದೊಂದಿಗೆ ಕಣ್ಮರೆಯಾಗುತ್ತದೆ, ಕಾರಣ ನಾವೂ ಸಹ ಅದರ ಒಂದು ಭಾಗ. ಇದನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ, ಅದು ಪ್ರಕೃತಿಯ ನಿಯಮ, ಜಗತ್ತಿನ ನಿಜವಾದ ಸತ್ಯ. ಪ್ರಕೃತಿಯಲ್ಲಿರುವ ಪ್ರತಿ ವಸ್ತುವಿನಲ್ಲಿ ಒಂದು ಶಕ್ತಿ ಇರುವಂತೆ ಮನುಷ್ಯನಲ್ಲಿಯೂ ಇದೆ. ಅದನ್ನು ಪದಗಳಿಂದ ಅಥವಾ ಹೆಸರಿನಿಂದ ವರ್ಣಿಸಲು ಸಾಧ್ಯವಿಲ್ಲ. ರವಿ ಕಾಣದ್ದನ್ನು ಕವಿ ಕಂಡ ಎನ್ನುವಂತೆ ಜಿಜ್ಞಾಸುಗಳು ಪ್ರಕೃತಿಯಲ್ಲಿ ದೈವದ ಅನುಭೂತಿಯನ್ನು ಅನುಭವಿಸಿ ಅದ್ಭುತ ಎಂದು ಹೇಳಿದ್ದಾರೆ. ದೈವತ್ವ ಎನ್ನುವುದು ಮಹಾಸಾಗರದಂತೆ, ಮೀನುಗಳು ಅದರಲ್ಲಿ ವಾಸಿಸುವ ಜೀವಿಗಳು, ಸಾಗರ ಇಲ್ಲದೆ ಹೋದರೆ ಮೀನುಗಳ ಅಸ್ತಿತ್ವವೇ ಇಲ್ಲ. ಸಾಗರ ಮೀನುಗಳನ್ನು ಪ್ರೀತಿಸುವುದೂ ಇಲ್ಲ, ದ್ವೇಷಿಸುವುದೂ ಇಲ್ಲ. ದೈವತ್ವ ಎನ್ನುವ ಮಹಾಸಾಗರದಲ್ಲಿ ಮನುಷ್ಯರು ಚಿಕ್ಕ ಮೀನುಗಳಂತೆ. ಮನುಷ್ಯ ತನ್ನ ಅಸ್ತಿತ್ವಕ್ಕೆ ದೈವತ್ವ ಎನ್ನುವ ಮಹಾಸಾಗರದಲ್ಲಿ ಇರಲೇಬೇಕು. ದೈವತ್ವವನ್ನು ಅರಿತಾಗ ಜೀವನವನ್ನು ಆನಂದಿಸಲು ಸಾಧ್ಯ. ಪ್ರಕೃತಿಗಿಂತ ದೊಡ್ಡದು ಬೇರೆ ಇಲ್ಲ ಮತ್ತು ಅದಕ್ಕೆ ಸರಿಸಮಾನವಾದದ್ದು ಏನೂ ಇಲ್ಲ. ಪ್ರಕೃತಿಗೆ ಪ್ರಕೃತಿಯೇ ಸಮ. ಇದೆ ಪ್ರಕೃತಿಯ ದೈವಿಕತತ್ವ. ನಾವು ವಾಸಿಸುವ ಪ್ರಕೃತಿಯನ್ನು ದೈವತ್ವದ ಅನುಭೂತಿಯಿಂದ ಅನುಭವಿಸಿದಾಗ ಜೀವನ ಸ್ವಚ್ಛ, ಶಾಂತ ಹಾಗೂ ಸಂತೋಷವಾಗಿರುತ್ತದೆ. ಈ ಮಹಾನ್‌ದೈವಿಕ ವಾಸ್ತವದ ಅನುಭವವನ್ನು ಪಡೆಯುವುದೇ ಸಾಕ್ಷಾತ್ಕಾರ ಎಂದು ತಿಳಿಸಿದರು.

□

## ಪರಮಾತ್ಮ ನಿತ್ಯ ನಿತಂತರ

ನಭೋಮಂಡಲದಲ್ಲಿರುವ ಭೌತಿಕವಸ್ತುಗಳು ಶಾಶ್ವತವಾದವುಗಳಲ್ಲ, ಅವುಗಳು ನಿರಂತರ ಬದಲಾವಣೆಯಿಂದ ಕೂಡಿರುತ್ತವೆ. ಪರಮಾತ್ಮ, ಶೂನ್ಯತತ್ವ– ಪರಮಸತ್ಯಕ್ಕೆ ಯಾವುದೇ ಬದಲಾವಣೆ ಇಲ್ಲ. ನಿತ್ಯ, ನಿರಂತರ ಶಾಶ್ವತವಾದುದೆಂದು ವಿಜಯಪುರ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ತಿಳಿಸಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 28.3.2021 ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಪ್ರವಚನ ನೀಡುತ್ತಾ ಕಣ್ಣಿಗೆ ಗೋಚರಿಸುವ ಭೌತಿಕ ವಸ್ತುಗಳು ಮತ್ತು ಜಗತ್ತು ಸತ್ಯವಾದರೂ ಶಾಶ್ವತವಲ್ಲ. ಇವುಗಳ ಅಸ್ತಿತ್ವವು ಕಾಲಕ್ಕೆ ಸೀಮಿತವಾಗಿದೆ. ಇವುಗಳನ್ನು ಹೊರತುಪಡಿಸಿ ಒಂದು ಅದ್ಭುತ ಶಕ್ತಿ ಇದೆ, ಅದುವೇ ಆತ್ಮ. ಇದು ಕಾಲಾತೀತವಾದುದು. ಇದು ಸಮಯಕ್ಕೆ ಬಂಧವಲ್ಲ, ಇದೆ ನಿಜವಾದ ಸತ್ಯ. ಕಾಲಾತೀತ ವಾಸ್ತವತೆಯನ್ನು ತಿಳಿದಾಗ ಸತ್ಯವನ್ನು ಅರಿಯಲು ಸಾಧ್ಯ. ಮನುಷ್ಯನ ದೇಹಕ್ಕೆ ಆಕಾರವುಂಟು, ದೇಹದಲ್ಲಿರುವ ಮನಸ್ಸಿಗೆ ಆಕಾರ ಮತ್ತು ಬಣ್ಣವಿಲ್ಲ, ಇದನ್ನು ವಿವರಿಸಲು ಅಸಾಧ್ಯ. ಇದನ್ನು ಉಪಯೋಗಿಸುತ್ತೇವೆ, ಆದರೆ ನೋಡಲು ಸಾಧ್ಯವಿಲ್ಲ ಮತ್ತು ಅನ್ವೇಷಿಸಬಹುದಾದ ಯಾವುದೇ ಗುಣವನ್ನು ಹೊಂದಿಲ್ಲ. ಮನಸ್ಸನ್ನು ಅನುಭವಿಸಲು ಮತ್ತು ಭಾವನೆಯಿಂದ ಮುಟ್ಟಲು ಸಾಧ್ಯ ಆದರೆ ಒಂದು ವಸ್ತುವಿನಂತೆ ಕೈಯಲ್ಲಿ ಹಿಡಿಯಲು ಹಾಗೂ ತೂಕ ಮಾಡಲು ಸಾಧ್ಯವಿಲ್ಲ, ಕಾರಣ ಅದು ವರ್ಣನಾತೀತವಾಗಿದೆ. ಮನಸ್ಸನ್ನು ಸುಡಲು ಅಥವಾ ನಾಶಮಾಡಲು ಆಗದು. ಬುದ್ಧಿವಂತಿಕೆ, ಅಧಿಕಾರ, ಸಂಪತ್ತು, ಸೌಂದರ್ಯ ಯಾವುದು ಶಾಶ್ವತವಲ್ಲ, ಕಾರಣ ಇವುಗಳು ಬೆಳೆಯುತ್ತವೆ. ಯಾವುದು ಬೆಳವಣಿಗೆಯನ್ನು ಹೊಂದಿರುತ್ತದೆಯೊ ಅದು ಕಣ್ಮರೆಯಾಗುತ್ತದೆ. ಕಣ್ಣಿಗೆ ಕಾಣುವ ಪ್ರತಿಯೊಂದು ವಸ್ತು ಬದಲಾವಣೆ ಹೊಂದುತ್ತದೆ. ಇದು ಪ್ರಕೃತಿಯ ನಿಯಮ. ಏನೂ ಇಲ್ಲದ, ಎಲ್ಲವನ್ನು ಒಳಗೊಂಡಿರುವ ಶೂನ್ಯವು ಪರಮ ಆತ್ಮ, ಇದು ನಿತ್ಯ ಸತ್ಯವಾದುದೆಂದು ತಿಳಿಸಿದರು. ಹರಗುರುಚರಮೂರ್ತಿಗಳು, ಜಿಜ್ಞಾಸುಗಳು ಭಾಗವಹಿಸಿದ್ದರು

## ಅನಗತ್ಯ ಆಕರ್ಷಣೆಗಳಿಗೆ ಒಳಗಾಗದೆ ಸಮಯವನ್ನು ಗುರಿ ಮುಟ್ಟುವ ಕಡೆ ಕೇಂದ್ರೀಕರಿಸಬೇಕು



ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಅಯೋಜಿಸಿದ್ದ ಅಭಿವಿನ್ಯಾಸ ಕಾರ್ಯಕ್ರಮವನ್ನು ಶ್ರೀಮತಿ ಪ್ರಿಯದರ್ಶಿನಿ ಈಶ್ವರ ಸಾಣಿಕೊಪ್ಪ ಉದ್ಘಾಟಿಸಿದರು

ಅನಗತ್ಯ ಆಕರ್ಷಣೆಗಳಿಗೆ ಒಳಗಾಗದೆ ಸಮಯವನ್ನು ಗುರಿ ಮುಟ್ಟುವ ಕಡೆ ಕೇಂದ್ರೀಕರಿಸಬೇಕೆಂದು ಚಾಮರಾಜನಗರ ಡಿವೈಎಸ್ಪಿ ಶ್ರೀಮತಿ ಪ್ರಿಯದರ್ಶಿನಿ ಈಶ್ವರ ಸಾಣಿಕೊಪ್ಪ ಹೇಳಿದರು.

ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 26.2.2021ರಂದು ಅಯೋಜಿಸಿದ್ದ ಅಭಿವಿನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ವಿದ್ಯಾರ್ಥಿ ದೆಸೆಯಲ್ಲಿ ಎನ್‌ಸಿಸಿ ಕ್ಯಾಂಪ್‌ಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದ ಕಾರಣ ಪಿಯುಸಿಯಲ್ಲಿ ಗಣಿತಶಾಸ್ತ್ರದಲ್ಲಿ ನಪಾಸಾದರೂ, ಛಲವಿಲ್ಲದವರ ಮೆಚ್ಚ ನಮ್ಮ ಕೂಡಲಸಂಗಮದೇವ ಎಂಬಂತೆ, ಕಷ್ಟಪಟ್ಟು ಓದಿ ಉತ್ತಮ ಅಂಕದೊಂದಿಗೆ ಉತ್ತೀರ್ಣಳಾದೆ. ನಂತರ ಕೆಎಎಸ್ ಪರೀಕ್ಷೆ ಬರೆದು ಉನ್ನತ ಹುದ್ದೆ ಅಲಂಕರಿಸಿದೆ. ವಿದ್ಯಾರ್ಥಿಗಳು ಆಸಕ್ತಿಯಿಂದ ಓದಬೇಕು. ನಾನು ನನ್ನ ಸಂಕಲ್ಪದಿಂದ ಮಾತ್ರ, ಎರಡನೇ ಪ್ರಯತ್ನದಲ್ಲಿ ಕೆಎಎಸ್ ಪರೀಕ್ಷೆಯಲ್ಲಿ 4ನೇ ರ್‍ಯಾಂಕ್ ಪಡೆದು, ಡಿವೈಎಸ್ಪಿ ಹುದ್ದೆಯನ್ನು ಪಡೆದೆನು. ಗೆದ್ದಾಗ ಬೀಗಬಾರದು, ಬಾಗಬೇಕು ಹಾಗಾದರೆ ಮಾತ್ರ ಉನ್ನತ ಹುದ್ದೆಗೇರಲು ಸಾಧ್ಯ. ಜೀವನದಲ್ಲಿ ಅಧ್ಯಯನವೇ ಶ್ರೇಷ್ಠವಾದದ್ದು. ಯಾರು ಸಮಯವನ್ನು ಗೌರವಿಸುತ್ತಾರೋ ಅವರನ್ನು ಗೌರವಿಸುವ ಸಮಯ ಬಂದೇ ಬರುತ್ತದೆ. ತೊಟ್ಟಿಲನ್ನು ತೂಗುವ ಕೈ ಜಗತ್ತನ್ನು ಆಳಬಲ್ಲದು ಎಂಬ ಮಾತನ್ನು ಹೆಣ್ಣು ಮಕ್ಕಳು ನಿರೂಪಿಸಬೇಕು ಎಂದು ಹೇಳಿದರು.

ಪ್ರಾಂಶುಪಾಲರಾದ ಶ್ರೀ ಕೆ.ಎಸ್. ಮರಿಸ್ವಾಮಿಯವರು ನಮ್ಮ ಕಾಲೇಜು ನ್ಯಾಕ್ ಸಮಿತಿಯಿಂದ ಎ ಗ್ರೇಡ್ ಮಾನ್ಯತೆಯನ್ನು ಪಡೆದಿದೆ. ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಕ್ರೀಡೆಯಲ್ಲಿ ರಾಷ್ಟ್ರಮಟ್ಟದವರೆಗೂ ತಲುಪಿರುವುದು ಹೆಮ್ಮೆಯ ವಿಷಯ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಕೋರಲಾಯಿತು. ಕು. ಸಿಂಧು ಪ್ರಾರ್ಥಿಸಿದರು. ಶ್ರೀ ಜಿ. ಸಿದ್ಧರಾಜು ಸ್ವಾಗತಿಸಿದರು. ಶ್ರೀಮತಿ ತ್ರಿವೇಣಿ ವಂದಿಸಿದರು. ಶ್ರೀಮತಿ ಸಿ. ರೂಪಶ್ರೀ ನಿರೂಪಿಸಿದರು.

## ಹಿರಿಯ ನಾಗರಿಕರಿಗೆ ಕೋವಿಡ್-19 ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಹಿರಿಯ ನಾಗರಿಕರಿಗೆ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ರಾಜವಂಶಸ್ಥರಾದ ಡಾ. ಪ್ರಮೋದಾದೇವಿ ಒಡೆಯರ್‌ರವರು ಚಾಲನೆ ನೀಡಿದರು

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಹಿರಿಯ ನಾಗರಿಕರಿಗೆ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ರಾಜವಂಶಸ್ಥರಾದ ಡಾ. ಪ್ರಮೋದಾದೇವಿ ಒಡೆಯರ್‌ರವರು ಚಾಲನೆ ನೀಡಿದರು. ಲಸಿಕೆ ಪಡೆಯುವುದರಿಂದ ಯಾವುದೇ ಅಡ್ಡ ಪರಿಣಾಮ ಆಗುವುದಿಲ್ಲ, ಈಗಾಗಲೇ ಲಸಿಕೆ ಪಡೆದವರನ್ನು ಅಧ್ಯಯನ ಮಾಡಿ ವೈದ್ಯರು ದೃಢಪಡಿಸಿದ್ದಾರೆ, ಹೀಗಾಗಿ ಯಾರೂ ಆತಂಕ ಪಡದೆ ಲಸಿಕೆ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಲಸಿಕೆ ಹಾಕಿಸಿಕೊಳ್ಳಲು ಆರ್ಥಿಕ ಸಮಸ್ಯೆ ಇರುವ ಒಂದು ಸಾವಿರ ಮಂದಿಗೆ ನನ್ನ ಕಡೆಯಿಂದ ಉಚಿತ ಲಸಿಕೆ ಕೊಡಿಸುತ್ತೇನೆ. ಅವರು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನೋಂದಣಿ ಮಾಡಿಕೊಂಡು ಸಂಪರ್ಕಿಸಬಹುದು. ಈಗ ನಾನು ಲಸಿಕೆ ತೆಗೆದುಕೊಳ್ಳುತ್ತಿಲ್ಲ, ನನ್ನ ಸರದಿ ಬಂದಾಗ ನೋಂದಣಿ ಮಾಡಿಕೊಂಡು ಲಸಿಕೆ ಪಡೆದುಕೊಳ್ಳುತ್ತೇನೆ ಎಂದು ತಿಳಿಸಿದರು.

ಖ್ಯಾತ ಭರತನಾಟ್ಯ ಕಲಾವಿದರಾದ ಡಾ. ವಸುಂಧರಾ ದೊರೆಸ್ವಾಮಿ ಮೊದಲಿಗರಾಗಿ ಲಸಿಕೆ ಪಡೆದರು. ನಂತರ ಹೊಸಮಠದ ಶ್ರೀ ಚಿದಾನಂದ ಸ್ವಾಮಿಗಳು ಲಸಿಕೆ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಆಸ್ಪತ್ರೆಯ ನಿರ್ದೇಶಕರಾದ ಕರ್ನಲ್. ಡಾ. ಎಂ. ದಯಾನಂದ, ವೈದ್ಯಕೀಯ ಅಧೀಕ್ಷಕರಾದ ಡಾ. ಎಸ್. ಗುರುಸ್ವಾಮಿ ಮತ್ತು ಡಾ. ಎಂ.ಡಿ. ರವಿ ಮುಂತಾದವರು ಹಾಜರಿದ್ದರು.

## ಪಲ್ಸ್ ಪೋಲಿಯೋ ಕಾರ್ಯಕ್ರಮ

ದಿನಾಂಕ 31.1.2021 ರಿಂದ 3.2.2021 ರವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವು ಜರುಗಿತು. ಈ ಕಾರ್ಯಕ್ರಮದಲ್ಲಿ ಮೈಸೂರಿನ ಜೆಎಸ್‌ಎಸ್ ನರ್ಸಿಂಗ್ ಶಾಲೆಯ ತೃತೀಯ ವರ್ಷದ 79 ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರ ಆದೇಶದ



ಮೇರೆಗೆ ಇಂದಿರಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 45 ವಿದ್ಯಾರ್ಥಿಗಳನ್ನು ಹಾಗು ಚಾಮುಂಡಿಪುರಂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 34 ವಿದ್ಯಾರ್ಥಿಗಳನ್ನು ನಿಯೋಜಿಸಲಾಗಿತ್ತು. ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಎರಡೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಗೆ ಒಳಪಡುವ ಪ್ರತಿಯೊಂದು ಮನೆಗಳ ಸಮೀಕ್ಷೆ ನಡೆಸಿ 5 ವರ್ಷದೊಳಗಿರುವ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಹಾಕುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿರುತ್ತಾರೆ.

□

## ರಾಷ್ಟ್ರೀಯ ವಿಜ್ಞಾನ ದಿನಾಚರಣೆ

### ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆ, ಸರಸ್ವತಿಪುರಂ



ಸರಸ್ವತಿಪುರಂನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿನಾಂಕ 1.3.2021ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸರಸ್ವತಿಪುರಂ ಅಗ್ನಿಶಾಮಕ ಠಾಣೆಯ ಸಹಾಯಕ ಅಧಿಕಾರಿಗಳಾದ ಶ್ರೀ ಟಿ.ಎಸ್. ಯಲ್ಲರಾಜುರವರು ಅಗ್ನಿ ಅವಘಡಗಳ ಬಗ್ಗೆ ತಿಳಿಸಿದರು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಕೆ.ಎಸ್. ಪ್ರೇಮಲತಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ವೀಣಾ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀಮತಿ ಗಂಗಾ ಸ್ವಾಗತಿಸಿದರು. ವಿದ್ಯಾರ್ಥಿಗಳಾದ ಜಿ. ಮಾದೇಶ್ ಮತ್ತು ಕು. ಪ್ರೇಕ್ಷಾ ವಿಜ್ಞಾನ ದಿನಾಚರಣೆಯ ಮಹತ್ವಗಳನ್ನು ತಿಳಿಸಿಕೊಟ್ಟರು. ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಏರ್ಪಡಿಸಿದ್ದ ಆಶುಭಾಷಣ ಸ್ಪರ್ಧೆ ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು. ಶ್ರೀಮತಿ ಚಂದ್ರಕಲಾರವರು ವಂದಿಸಿದರು. ಶ್ರೀಮತಿ ಶಿಲ್ಪರವರು ಕಾರ್ಯಕ್ರಮ ನಿರೂಪಿಸಿದರು. ಅಗ್ನಿಶಾಮಕ ದಳದ ತಂಡದವರು ನೀರನ್ನು ಬಳಸಿ ಅಗ್ನಿ ಅವಘಡವನ್ನು ನಂದಿಸುವ ಪ್ರದರ್ಶನವನ್ನು ನೀಡಿದರು.

## ಜೆಎಸ್‌ಎಸ್ ಪ್ರೌಢಶಾಲೆ, ಕೆ.ಆರ್. ನಗರ

ಕೆ.ಆರ್.ನಗರದ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ದಿನಾಂಕ 1.3.2021ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಲಾಯಿತು.

ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಮಹೇಶ್‌ರವರು ಮಾತನಾಡುತ್ತಾ, ನೋಬೆಲ್ ಪ್ರಶಸ್ತಿಯನ್ನು ಆಲ್‌ಫ್ರೆಡ್ ನೋಬೆಲ್‌ರವರ ಜ್ಞಾಪಕಾರ್ಥವಾಗಿ ಅತ್ಯುತ್ತಮ ಸಾಧನೆಗೈಯುವ ಮಹನೀಯರಿಗೆ ನೀಡಲಾಗುತ್ತಿದೆ. ವಿಜ್ಞಾನ ಕ್ಷೇತ್ರಕ್ಕೆ ಕೊಡುಗೆ ನೀಡಿದ ಥಾಮಸ್ ಅಲ್ವಾ ಎಡಿಸನ್, ಸಿ.ವಿ.ರಾಮನ್, ಅರಗೋವಿಂದ ಕೊರಾನ್ ಮುಂತಾದ ವಿಜ್ಞಾನಿಗಳನ್ನು ನಾವೆಲ್ಲಾ ಸ್ಮರಿಸಬೇಕು. ವೈಜ್ಞಾನಿಕ ಆಲೋಚನೆಗಳು ಬಡತನದಲ್ಲೇ ಅರಳುತ್ತವೆ ಎಂಬುದಕ್ಕೆ ಇವರೆಲ್ಲ ಉದಾಹರಣೆ. ವಿದ್ಯಾರ್ಥಿಗಳು ವೈಜ್ಞಾನಿಕ ತಳಹದಿಯ ಮೇಲೆ ಜೀವನ ರೂಪಿಸಿಕೊಂಡು ಸಮಾಜಕ್ಕೆ ಮತ್ತು ವಿಜ್ಞಾನ ಕ್ಷೇತ್ರಕ್ಕೆ ಉತ್ತಮ ಕೊಡುಗೆಗಳನ್ನು ನೀಡಬೇಕೆಂದು ತಿಳಿಸಿದರು.

ಮುಖ್ಯೋಪಾಧ್ಯಾಯರಾದ ಶ್ರೀ ಬಿ.ಎಲ್. ಮುದ್ದುಬಸವಣ್ಣರವರು ಅಡುಗೆ ಮನೆ ರಾಸಾಯನಿಕ ವಸ್ತುಗಳ ಉಗ್ರಾಣವಾಗಿದೆ. ಅಡುಗೆ ಉಪ್ಪು, ಸಕ್ಕರೆ, ಅಕ್ಸಾಲಿಕ್ ಆಮ್ಲವನ್ನೊಳಗೊಂಡ ಟಮೋಟೋ, ಹುಣಸೇಹಣ್ಣಿನಲ್ಲಿರುವ ಟಾರ್ಟರಿಕ್ ಆಮ್ಲ, ನಿಂಬೆರಸದಲ್ಲಿರುವ ಸಿಟ್ರಿಕ್ ಆಮ್ಲ ಇವೆಲ್ಲದರ ಪಾತ್ರ ನಿತ್ಯಜೀವನದಲ್ಲಿ ಸಾಕಷ್ಟಿದೆ. ಇವುಗಳ ಅಸ್ತಿತ್ವವನ್ನು ಪರಿಚಯಿಸಿಕೊಳ್ಳಿ. ಅಲ್ಲದೇ ರಸ್ತೆಬದಿ ತಿಂಡಿಗಳು, ಜಂಕ್‌ಫುಡ್‌ಗಳು, ಕಲುಷಿತ ಆಹಾರ ಮತ್ತು ನೀರಿನ ಸೇವನೆ ಮಾಡಬೇಡಿ, ಮನೆಯ ಆಹಾರವನ್ನು ಮರೆಯಬೇಡಿ, ವೈಜ್ಞಾನಿಕವಾಗಿ ಆಲೋಚಿಸಿ ಎಂದು ತಿಳಿಸಿದರು.

ಕು. ಸೂಫಿಯಾ ಬಾನು ನಿರೂಪಿಸಿದರು. ಕು. ಚೈತ್ರ ಸ್ವಾಗತಿಸಿದರು. ಕು. ಐಶ್ವರ್ಯ ವಂದಿಸಿದರು.

## ಸುತ್ತೂರು ಶ್ರೀಕ್ಷೇತ್ರದಲ್ಲಿ ಸಂಭ್ರಮದ ಮಹಾಶಿವರಾತ್ರಿ

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 11.3.2021 ರಂದು ಮಹಾಶಿವರಾತ್ರಿಯ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಿದವು. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಾರಾಯಣಸ್ವಾಮಿ ದೇವಾಲಯಗಳಲ್ಲಿ ರುದ್ರಾಭಿಷೇಕ, ಅಷ್ಟೋತ್ತರ ಮತ್ತು ವಿಶೇಷ ಪೂಜೆಗಳು ನೆರವೇರಿದವು.

ಮೈಸೂರಿನ ರಘುಲೀಲಾ ಸಂಗೀತ ಮಂದಿರದ ಕಲಾವಿದರಿಂದ 'ಭಕ್ತಿ ಸಂಕೀರ್ತನೆ' ವಿಶೇಷ ಭಜನಾ ಕಾರ್ಯಕ್ರಮ ಜರುಗಿತು. ಸುತ್ತೂರು ವಸತಿ ಶಾಲೆಯ ಸಂಗೀತ ಶಿಕ್ಷಕರು ವಚನ ಗಾಯನ ಮಾಡಿದರು. ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಕಲಬುರ್ಗಿಯ ಶ್ರೀಮತಿ ಇಂದುಮತಿ ಸಾಲಿಮಠ ಮತ್ತು ತಂಡದವರಿಂದ 'ಜೀವನೋತ್ಸಾಹ' ಕಾರ್ಯಕ್ರಮ ನಡೆಯಿತು. ಸುತ್ತೂರಿನ ಶ್ರೀ ಗುರುಶಾಂತಪ್ಪ ಮತ್ತು ತಂಡದವರು ಭಕ್ತಿ ಗೀತೆಗಳ ಗಾಯನ ಮಾಡಿದರು. ಬಾಣಹಳ್ಳಿ, ಭೋಗಯ್ಯನಹುಂಡಿ, ಹೊಸಹಳ್ಳಿ, ಚುಂಚನಹಳ್ಳಿ ಮತ್ತು ಹೊರಳವಾಡಿಯ ಭಜನಾ ತಂಡದವರು ಅಖಂಡ ಭಜನೆ ನಡೆಸಿಕೊಟ್ಟರು. ಇದೇ ಸಂದರ್ಭದಲ್ಲಿ 80ಕ್ಕೂ ಹೆಚ್ಚು ವಟುಗಳಿಗೆ ಶಿವದೀಕ್ಷೆ ನೀಡಲಾಯಿತು. ನೂರಾರು ಭಕ್ತರು ಶಿವಪೂಜೆಯಲ್ಲಿ ಪಾಲ್ಗೊಂಡಿದ್ದರು.

□

# ಗುಣಾತ್ಮಕ ಶಿಕ್ಷಣದಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ




ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ ಅಧ್ಯಾಪಕರ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು

ದೇಶದ ಭವಿಷ್ಯ ಶಾಲಾ ಕಾಲೇಜುಗಳ ಕೊಠಡಿಗಳಲ್ಲಿ ನಿರ್ಮಾಣವಾಗುತ್ತದೆ. ಯಾವ ದೇಶದಲ್ಲಿ ಗುಣಾತ್ಮಕ ಶಿಕ್ಷಣ ದೊರೆಯುತ್ತದಯೋ ಆ ದೇಶವು ಆರ್ಥಿಕ, ಸಾಮಾಜಿಕ, ನೈತಿಕ ಹಾಗೂ ಸಾಂಸ್ಕೃತಿಕವಾಗಿ ಶ್ರೀಮಂತಗೊಳ್ಳುತ್ತದೆ ಎಂದು ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಪ್ರಭುರವರು ಹೇಳಿದರು.

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 2.3.2021ರಂದು ಐಕ್ಯೂಎಸಿ ವತಿಯಿಂದ ಆಯೋಜಿಸಿದ್ದ "ಅಧ್ಯಾಪಕರ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮ" ಉದ್ಘಾಟಿಸಿ ವಿದ್ಯಾರ್ಥಿಗಳ ಮನಸಲ್ಲಿ ಕನಸು ಬಿತ್ತುವ ಕನಸುಗಾರರೇ ಶಿಕ್ಷಕರು ಹಾಗೂ ಆ ಕನಸುಗಳನ್ನು ನನಸು ಮಾಡಿಕೊಳ್ಳುವ ಸಹಾಯ ಹಸ್ತ ಚಾಚುವ ಮಾರ್ಗದರ್ಶಕರೂ ಅವರೆ. ಯಾವುದೇ ಒಬ್ಬ ವ್ಯಕ್ತಿಯ ಜೀವನದ ಸಾಧನೆಗೆ ಸ್ಫೂರ್ತಿ, ಪ್ರೇರಣೆ ಶಿಕ್ಷಕರಿಂದಲೇ ಪ್ರಾರಂಭವಾಗುವುದು. ಶಿಕ್ಷಣ ಹಾಗೂ ಶಿಕ್ಷಕರ ಮಾರ್ಗದರ್ಶನವಿದ್ದರೆ ಸಾಮಾನ್ಯ ವ್ಯಕ್ತಿಯೂ ಕೂಡ ಅಸಾಮಾನ್ಯವಾದ ಸಾಧನೆ ಮಾಡಲು ಸಾಧ್ಯ. ಎಂತಹದೇ ಸಮಯ ಸಂದರ್ಭದಲ್ಲಿಯೂ ಶಿಕ್ಷಕರು ನಿರುತ್ಸಾಹಿಗಳಾಗದೇ ಸದಾ ಉತ್ಸಾಹದ ಚಿಲುಮೆಯಾಗಿ ವಿದ್ಯಾರ್ಥಿಗಳಿಗೆ ಆದರ್ಶವಾಗಬೇಕು. ವಿದ್ಯಾರ್ಥಿಗಳಿಗೆ ಸಂಸ್ಕಾರದ ಪಾಠವನ್ನು ತಾಯಿ ತಂದೆಯರು ನೀಡಿದರೆ ಅವರಿಗೆ ಶಿಕ್ಷಣ, ಜೀವನ ಮೌಲ್ಯಗಳ ಪಾಠ ನೀಡುವವರು ಗುರುಗಳಾಗಿದ್ದಾರೆ. ವಿದ್ಯಾರ್ಥಿಗಳಿಗೆ ನೀಡುವ ಶಿಕ್ಷಣ ಹಾಗೂ ಮಾರ್ಗದರ್ಶನ ಗುಣಾತ್ಮಕವಾಗಿದ್ದಲ್ಲಿ ಅವರು ಸತ್ಪ್ರಜೆಗಳಾಗಿ, ಮೌಲ್ಯಯುತ ಮಾನವ ಸಂಪನ್ಮೂಲಗಳೆನಿಸಿಕೊಂಡು ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ತಿಳಿಸಿದರು.

ನಂಜನಗೂಡು ಜೆಎಸ್‌ಎಸ್ ಕಾಲೇಜಿನ ಸಹ ಪ್ರಾಧ್ಯಾಪಕರಾದ ಪ್ರೊ. ವಿಜಯೇಂದ್ರ ಕುಮಾರ್ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಅಧ್ಯಾಪಕರಿಗೆ ನ್ಯಾಕ್ ಸಂಬಂಧಿತ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಬೆಳಕು ಚೆಲ್ಲುವ ಮೂಲಕ ಸವಿಸ್ತಾರವಾಗಿ ತಿಳಿಯಪಡಿಸಿದರು. ಅಧ್ಯಾಪಕ ಮತ್ತು ಅಧ್ಯಾಪಕೇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಬೋಧನೆಯಲ್ಲಿ ಸೃಜನಶೀಲತೆಯನ್ನು ರೂಢಿಸಿಕೊಳ್ಳಬೇಕು



ಸುತ್ತೂರು ಜೆಎಸ್ಎಸ್ ಡಿ.ಇಎಲ್.ಇಡಿ ಕಾಲೇಜಿನ ವಿದ್ಯಾರ್ಥಿ ಸಂಘವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಬಿ.ಎ. ರಾಜಶೇಖರ, ಶ್ರೀ ಜಿ.ಎಲ್. ತ್ರಿಪುರಾಂತಕ, ಶ್ರೀ ನಟರಾಜು ಹಾಗೂ ಶ್ರೀ ಎಸ್. ಶಿವಸ್ವಾಮಿಯವರುಗಳಿದ್ದಾರೆ.

ಬೋಧನೆಯಲ್ಲಿ ಸೃಜನಶೀಲತೆಯನ್ನು ರೂಢಿಸಿಕೊಳ್ಳಬೇಕು ಎಂದು ಜೆಎಸ್ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಬಿ.ಎ. ರಾಜಶೇಖರರವರು ತಿಳಿಸಿದರು.

ಸುತ್ತೂರಿನ ಜೆಎಸ್ಎಸ್ ಶಿಕ್ಷಕರ ಪ್ರಶಿಕ್ಷಣ ಸಂಸ್ಥೆಯಲ್ಲಿ ದಿನಾಂಕ. 3.3.2021 ರಂದು ನಡೆದ 2020–21ನೇ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ, ಶಿಕ್ಷಕರಾಗುವಂತವರು ಅಗತ್ಯ ವೃತ್ತಿ, ಕೌಶಲ್ಯಗಳನ್ನು ಗಳಿಸಿಕೊಂಡು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಮಾರ್ಗದರ್ಶನ ಮಾಡುವುದರ ಜೊತೆಗೆ ಮಕ್ಕಳು ಆನಂದದಾಯಕವಾಗಿ ಕಲಿಕೆಯಲ್ಲಿ ತೊಡಗುವಂತೆ ಮಾಡಬೇಕೆಂದು ತಿಳಿಸಿದರು.

ಜೆಎಸ್ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು ವಿದ್ಯಾರ್ಥಿಗಳು ಕೀಳರಿಮೆ ಬೆಳೆಸಿಕೊಳ್ಳದೆ ಆತ್ಮವಿಶ್ವಾಸದಿಂದ ಯಶಸ್ಸು ಸಾಧಿಸಬೇಕು. ವೃತ್ತಿಗಳಲ್ಲಿ ಶಿಕ್ಷಕ ವೃತ್ತಿಯೇ ಶ್ರೇಷ್ಠವಾದುದು. ಹಲವು ಮಹನೀಯರು ಶಿಕ್ಷಕ ವೃತ್ತಿಯಿಂದಲೇ ದೇಶದ ರಾಷ್ಟ್ರಪತಿಯವರೆಗೆ ಅನೇಕ ಉನ್ನತ ಹುದ್ದೆಗಳನ್ನು ಪಡೆದರು ಎಂದರು.

## ನಿವೃತ್ತ ಅಧ್ಯಾಪಕರುಗಳಿಗೆ ಬೀಳ್ಕೊಡುಗೆ

ನಂಜನಗೂಡಿನ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 26.02.2021 ರಂದು ಕಾಲೇಜಿನ ಅಧ್ಯಾಪಕರ ಸಂಘದ ವತಿಯಿಂದ ವೃತ್ತಿಯಿಂದ ನಿವೃತ್ತರಾದ ಪ್ರೊ. ಪಿ. ನಿರ್ಮಲ ಮತ್ತು ಶ್ರೀಮತಿ ಎಸ್.ಎನ್. ನಿರ್ಮಲಾದೇವಿಯವರಿಗೆ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಲಾಗಿತ್ತು.




ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನಲ್ಲಿ ಅಧ್ಯಾಪಕರ ಸಂಘದ ವತಿಯಿಂದ ಏರ್ಪಡಿಸಿದ್ದ ನಿವೃತ್ತರಾದ ಪ್ರೊ. ಪಿ. ನಿರ್ಮಲ ಮತ್ತು ಶ್ರೀಮತಿ ಎಸ್.ಎನ್. ನಿರ್ಮಲಾದೇವಿಯವರ ಬೀಳ್ಕೊಡುಗೆ ಸಮಾರಂಭದಲ್ಲಿ ಪ್ರಾಂಶುಪಾಲರಾದ ಪ್ರೊ. ಹೆಚ್.ಎಸ್. ನಾಗೇಂದ್ರಕುಮಾರ್ ಮಾತನಾಡುತ್ತಿರುವುದು

ಆಂಗ್ಲಭಾಷಾ ವಿಭಾಗದ ಮುಖ್ಯಸ್ಥರಾದ ಡಾ. ಸಿ.ಎಸ್. ಹೊನ್ನೇಗೌಡ ಮಾತನಾಡಿ ನಿವೃತ್ತ ಪ್ರಾಧ್ಯಾಪಕದ್ವಯರು ಉತ್ತಮ ಸೇವಾ ಮನೋಭಾವನೆ ಹೊಂದಿದ್ದರು. ಸ್ನೇಹಪರರಾಗಿದ್ದರು. ಅವರ ನಿವೃತ್ತ ಜೀವನ ಸುಖಕರವಾಗಿರಲಿ ಎಂದರು.

ಅಧ್ಯಾಪಕರ ಸಂಘಧ ಅಧ್ಯಕ್ಷರಾದ ಪ್ರೊ. ಎಂ.ಪಿ. ವಿಜಯೇಂದ್ರಕುಮಾರ್ ನಿವೃತ್ತರೀರ್ವರು ಸರಳತೆ, ಕಾರ್ಯಕ್ಷಮತೆ ಮತ್ತು ಸಹಾಯ ಗುಣಗಳನ್ನೊಂದಿದ್ದರೆಂದು ಶ್ಲಾಘಿಸಿದರು.

ಪ್ರಾಂಶುಪಾಲರಾದ ಪ್ರೊ. ಹೆಚ್.ಎಸ್. ನಾಗೇಂದ್ರಕುಮಾರ್ ಅವರು ನಿವೃತ್ತರ ಚಿಂತನೆ, ಕ್ರೀಯಾಶೀಲ ಗುಣಗಳನ್ನು ಕುರಿತಂತೆ ಸ್ವರಚಿತ ಕವನಗಳನ್ನು ವಾಚಿಸಿ ನಿವೃತ್ತರ ಜೀವನ ಸುಖ ಸಂತೋಷದಿಂದ ಕೂಡಿರಲೆಂದು ಆಶಿಸಿದರು.

ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಸಿ.ವಿ. ಬಸವರಾಜು, ಅಧ್ಯಾಪಕ ಮತ್ತು ಅಧ್ಯಾಪಕೇತರರು ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಶ್ರೀಮತಿ ಸೌಮ್ಯ ಪ್ರಾರ್ಥಿಸಿದರು. ಶ್ರೀಮತಿ ಶ್ವೇತಶ್ರೀ ವಂದಿಸಿದರು ಹಾಗೂ ಶ್ರೀಮತಿ ಕಾವ್ಯಶ್ರೀ ನಿರೂಪಿಸಿದರು.

□

## ಬಡತನದಿಂದಾಗಿ ಯಾವ ಮಗುವು ಶಿಕ್ಷಣದಿಂದ ವಂಚಿತವಾಗಬಾರದು

ಬಡತನದಿಂದಾಗಿ ಯಾವ ಮಗುವು ಶಿಕ್ಷಣದಿಂದ ವಂಚಿತವಾಗಬಾರದು ಎಂದು ತಾಲ್ಲೂಕು ಪಂಚಾಯಿತಿ ಸದಸ್ಯರಾದ ಜವಾದ್ ಅಹಮದ್‌ರವರು ಹೇಳಿದರು.

ಬಂಡಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ದಿನಾಂಕ 6.3.2021 ರಂದು ಉಚಿತ ನೋಟ್‌ಬುಕ್ ವಿತರಣಾ ಕಾರ್ಯಕ್ರಮದಲ್ಲಿ ಮಾತಾನಾಡುತ್ತ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಬಡಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶ್ರಮಿಸುತ್ತಿರುವುದು ಪ್ರಶಂಸನೀಯವಾದುದು. ವಿದ್ಯಾರ್ಥಿಗಳು ಬಡತನದಿಂದಾಗಿ ಶಾಲೆಯನ್ನು ಬಿಡಬಾರದು ಎಂಬ ಉದ್ದೇಶದಿಂದ ಹಲವಾರು ಸಂಘ ಸಂಸ್ಥೆಗಳ ದಾನಿಗಳಿಂದ ಹಣವನ್ನು ಸಂಗ್ರಹಿಸಿ ನೋಟ್ ಪುಸ್ತಕಗಳನ್ನು ಖರೀದಿಸಿ ವಿತರಿಸಲಾಗುತ್ತಿದೆ.

ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯರಾದ ಅಬ್ರಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಮಿಲ್ಲತ್ ಜಾನ್, ಉಪಾಧ್ಯಕ್ಷರಾದ ಶಿಲ್ಪಾ, ಮುಖ್ಯಶಿಕ್ಷಕರು ಮತ್ತು ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು. ಶ್ರೀ ಹೆಚ್.ಎನ್. ಮಂಜುನಾಥ್ ಸ್ವಾಗತಿಸಿ, ನಿರೂಪಿಸಿದರು.

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

### ವೈದ್ಯಕೀಯ ಕ್ಷೇತ್ರಕ್ಕೆ ಮಹಿಳೆಯರ ಕೊಡುಗೆ ಅಪಾರವಾದುದು



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಉದ್ಘಾಟಿಸಿದ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ಶಿಲ್ಪಾನಾಗ್‌ರವರನ್ನು ಸನ್ಮಾನಿಸಲಾಯಿತು

ವೈದ್ಯಕೀಯ ಕ್ಷೇತ್ರಕ್ಕೆ ಮಹಿಳೆಯರ ಕೊಡುಗೆ ಅಪಾರವಾದುದು ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ಶಿಲ್ಪಾನಾಗ್‌ರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ದಿನಾಂಕ 8.3.2021ರಂದು ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಉದ್ಘಾಟಿಸಿ ವೈದ್ಯಕೀಯ ಕ್ಷೇತ್ರದಲ್ಲೂ ಮಹಿಳೆಯರು ಹೆಚ್ಚು ಸಾಧನೆ ಮಾಡಿದ್ದಾರೆ. ಈ ಕ್ಷೇತ್ರದಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶಗಳು ದೊರಕುತ್ತಿದ್ದು, ಅದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ನವಜಾತ ಶಿಶು ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ದೀಪ್ತಿ ತಾಂಡವೇಶ್ವರ, ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜು ಪ್ರಾಧ್ಯಾಪಕರಾದ ಡಾ. ಎಂ. ರೇಣುಕಾದೇವಿ, ಆರೋಗ್ಯ ವ್ಯವಸ್ಥೆ ನಿರ್ವಹಣಾ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರುಗಳಾದ

ಡಾ. ದಿವ್ಯರಾವ್ ಮತ್ತು ಡಾ. ಎಚ್.ಕೆ. ಮಮತಾರವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕರಾದ ಕರ್ನಲ್ ಡಾ. ಎಂ. ದಯಾನಂದ, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪ, ಡಾ. ಶ್ಯಾಮ್‌ಪ್ರಸಾದ್ ಶೆಟ್ಟಿ, ಡಾ. ಎಂ.ಎಸ್. ಶಾಂತಮಲ್ಲಪ್ಪ, ಡಾ. ಜಿ.ವಿ ಮಂಜುನಾಥ್, ಡಾ. ಸುಮನ, ಡಾ. ಎಂ.ಬಿ. ಭಾರತಿ, ಶ್ರೀಮತಿ ಜಾನೆಟ್ ಮಥಾಯಿಸ್ ಮತ್ತು ಜೆಎಸ್‌ಎಸ್ ಆಸ್ಪತ್ರೆಯ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

## ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ಮಹತ್ವದ ಸ್ಥಾನವಿದೆ




ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ಮಹತ್ವದ ಸ್ಥಾನವಿದೆ ಎಂದು ತಾಲ್ಲೂಕು ಸಿವಿಲ್ ನ್ಯಾಯಾಧೀಶರಾದ ಶ್ರೀ ಎನ್. ಶರತ್ ಚಂದ್ರರವರು ಹೇಳಿದರು.

ಯಳಂದೂರಿನ ಜೆಎಸ್‌ಎಸ್ ಬಾಲಿಕಾ ಪ್ರೌಢಶಾಲೆಯಲ್ಲಿ ದಿನಾಂಕ 8.3.2021ರಂದು ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಉದ್ಘಾಟಿಸಿ ಭಾರತೀಯ ಸಂವಿಧಾನದಲ್ಲಿ ಮಹಿಳೆಗೆ ವಿಶೇಷ ಸ್ಥಾನಮಾನ ನೀಡಲಾಗಿದೆ. ಹೆಣ್ಣುಭ್ರೂಣ ಹತ್ಯೆ ನಿಷೇಧ ಕಾಯಿದೆ, ಬಾಲ್ಯ ವಿವಾಹ ನಿಷೇಧ ಕಾಯಿದೆಗಳಿವೆ. ಆಸ್ತಿಯಲ್ಲಿ ಸಮಾನ ಹಕ್ಕಿದೆ. ಹೆಣ್ಣು ವಿದ್ಯಾವಂತಳಾಗಿ ಸ್ವಾವಲಂಬನೆಯ ಬದುಕನ್ನು ರೂಪಿಸಿಕೊಳ್ಳಬೇಕು. ಭಾರತೀಯ ಸಂಸ್ಕೃತಿಯನ್ನು ರೂಢಿಸಿಕೊಂಡು ಹಿರಿಯರು ಹಾಗೂ ಗುರುಗಳನ್ನು ಗೌರವಿಸಬೇಕು. ಪ್ರತಿಯೊಬ್ಬರಿಗೂ ಕಾನೂನಿನ ಅರಿವಿರಬೇಕು ಎಂದು ಹೇಳಿದರು.

ಯಳಂದೂರಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಶ್ರೀಮತಿ ಸಿ. ದೀಪಾರವರು

ಪ್ರತಿಯೊಬ್ಬ ಹೆಣ್ಣು ಸಂಸ್ಕಾರವನ್ನು ಅರಿತು ಬಾಳಬೇಕು. ಉದಾತ್ತವಾದ ಧ್ಯೇಯ ಹಾಗೂ ಆಲೋಚನೆ ಇರಬೇಕು. ವಿಶ್ವಮಟ್ಟದಲ್ಲಿ ಸಾಧನೆಗೈದ ಸಾಧಕಿಯರ ಆದರ್ಶವನ್ನು ಮೈಗೂಡಿಸಿಕೊಂಡು ಶಿಕ್ಷಣವನ್ನು ಪಡೆದು ಸಾಧಿಸಬೇಕು. ಪ್ರತಿಯೊಬ್ಬರನ್ನೂ ಸಮಾನ ಭಾವದಿಂದ ಕಾಣಬೇಕು ಎಂದರು.

ಮುಖ್ಯೋಪಾಧ್ಯಾಯರಾದ ಶ್ರೀ ಎಂ. ದೇವಲಿಂಗಸ್ವಾಮಿಯವರು 12ನೇ ಶತಮಾನದಲ್ಲೇ ಬಸವಣ್ಣನವರು ಹೆಣ್ಣಿಗೆ ಸಮಾನ ಸ್ಥಾನಮಾನವನ್ನು ನೀಡಿದ್ದರು. ಸ್ತ್ರೀ ಸಮಾನತೆ ಹಕ್ಕನ್ನು ಸದುಪಯೋಗ ಪಡೆಸಿಕೊಂಡು ಸದ್ಭಾವನೆ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಕು. ಪ್ರಿಯಾ ಸ್ವಾಗತಿಸಿದರು. ಕು. ನವ್ಯಶ್ರೀ ವಂದಿಸಿದರು. ಕು. ತನುಶ್ರೀ ಕಾರ್ಯಕ್ರಮ ನಿರೂಪಿಸಿದರು.

## ಮಹಿಳಾ ಸಾಮರ್ಥ್ಯವನ್ನು ಸಮಾಜಮುಖಿಯಾಗಿ ಬಳಸಿ



ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಹಿರಿಯ ವಿದ್ಯಾರ್ಥಿನಿಯರ ವೇದಿಕೆ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಶ್ರೀಮತಿ ವಿಜಯಲಕ್ಷ್ಮಿರವರು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಪ್ರೊ. ಎ.ಪಿ. ಮಹದೇವಪ್ಪ, ಶ್ರೀಮತಿ ಮಮತ, ಪ್ರಾಚಾರ್ಯರಾದ ಪ್ರೊ. ಉಮೇಶ, ಶ್ರೀಮತಿ ಪಾರ್ವತಿ, ಶ್ರೀಮತಿ ದಾಕ್ಷಾಯಿಣಿ ಹಾಗೂ ಶ್ರೀಮತಿ ವಾಣಿಯವರನ್ನು ಕಾಣಬಹುದು

ಸದಾ ಸಮಾಜ ಕಟ್ಟುವ ಕಾಯಕದಲ್ಲಿ ನಿರತಳಾಗಿರುವ ಮಹಿಳೆಯನ್ನು ಸಮಾನತೆಯಿಂದ ಕಾಣುವ ದೃಷ್ಟಿಕೋನ ಬೆಳಸಿಕೊಳ್ಳಬೇಕು. ಮಹಿಳಾ ಸಾಮರ್ಥ್ಯವನ್ನು ಸಮಾಜಮುಖಿಯನ್ನಾಗಿ ಬಳಸಿದರೆ ವ್ಯವಸ್ಥೆಯ ಬಹುತೇಕ ಸಮಸ್ಯೆಗಳು ಇಲ್ಲವಾಗುತ್ತವೆ ಎಂದು ಅಕ್ಕನ ಬಳಗ ಹಾಗೂ ಹಿರಿಯ ವಿದ್ಯಾರ್ಥಿಗಳ ವೇದಿಕೆಯ ಸದಸ್ಯರಾದ ಶ್ರೀ ವಿಜಯಲಕ್ಷ್ಮಿ ಹೇಳಿದರು.

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 8.3.2021ರಂದು ಹಿರಿಯ ವಿದ್ಯಾರ್ಥಿನಿಯರ ವೇದಿಕೆ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಅನಾದಿಕಾಲದಿಂದಲೂ ಮಹಿಳೆಯರ ಮೇಲೆ ಹಿಂಸೆ, ಅನ್ಯಾಯ, ಅಸಮಾನತೆ ನಡೆಯುತ್ತಲೇ ಇದೆ. ಮಹಿಳಾ ಪರವಾದ ದನಿಗಳು ಪ್ರತಿ ಕಾಲಘಟ್ಟದಲ್ಲೂ

ಆತ್ಮವಿಶ್ವಾಸದಿಂದ ಪ್ರತಿರೋಧ ಒಡ್ಡುತ್ತಲೇ ಬಂದಿವೆ. ಆದರೂ ಸಮಸ್ಯೆಗಳು ಹೊಸ ಹೊಸ ರೂಪದಲ್ಲಿ ಸೃಷ್ಟಿಯಾಗುತ್ತಿದ್ದು, ತಾರತಮ್ಯ ಮುಕ್ತ ಆರೋಗ್ಯಕರ ಸಮಾಜ ನಿರ್ಮಾಣವಾಗಬೇಕಿದೆ ಎಂದು ತಿಳಿಸಿದರು.

ಚಾಮರಾಜನಗರದ ಸರ್ಕಾರಿ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಪಾರ್ವತಿಯವರು ಭಾರತ ಸಂವಿಧಾನ ಮಹಿಳೆಯರಿಗೆ ಸೈದ್ಧಾಂತಿಕವಾಗಿ ಸಮಾನತೆ ನೀಡಿದೆ. ಆದರೆ ಅದು ಆಚರಣೆಯ ರೂಪವನ್ನು ಇದುವರೆವಿಗೂ ತಾಳಲೇ ಇಲ್ಲ. ಸ್ವಾತಂತ್ರ್ಯ ಮತ್ತು ಸ್ವಾಭಿಮಾನದಿಂದ ಮಹಿಳೆ ಬದುಕುವ ದಿನಗಳು ಬಂದಾಗ ಮಹಿಳಾ ದಿನಾಚರಣೆಗೆ ಅರ್ಥ ಬರುತ್ತದೆ. ಪದವಿ ಮುಗಿಸಿದ ವಿದ್ಯಾರ್ಥಿಗಳನ್ನು ಕಾಲೇಜಿನಿಂದ ಹೊರಹಾಕುವ ಈ ದಿನಗಳಲ್ಲಿ ಜೆಎಸ್‌ಎಸ್ ಕಾಲೇಜಿನಲ್ಲಿ ಹಳೆಯ ವಿದ್ಯಾರ್ಥಿಗಳನ್ನು ಆಹ್ವಾನಿಸಿ, ಮಹಿಳಾ ದಿನಾಚರಣೆ ಆಯೋಜಿಸಿ, ಪ್ರತಿಭಾನ್ವಿತ ಹಿರಿಯ ವಿದ್ಯಾರ್ಥಿನಿಯರನ್ನು ಸನ್ಮಾನಿಸುವ ಸತ್ಸಂಪ್ರದಾಯ ನಿಜಕ್ಕೂ ಉತ್ತಮ ಬೆಳವಣಿಗೆಯಾಗಿದೆ ಎಂದರು.

ಕೊಳ್ಳೇಗಾಲದ ಸರ್ಕಾರಿ ಎಸ್‌ವಿಕೆ ಬಾಲಕಿಯರ ಪದವಿಪೂರ್ವ ಕಾಲೇಜು ಉಪನ್ಯಾಸಕರಾದ ಶ್ರೀಮತಿ ದಾಕ್ಷಾಯಿಣಿಯವರು ತಾಯ್ತನದಿಂದ ಪೊರೆಯಬಲ್ಲ ಮಹಿಳೆ ದೇಶವನ್ನು ರಕ್ಷಿಸಬಲ್ಲಳು, ಆಕಾಶದಲ್ಲಿ ನಿರ್ಭಯವಾಗಿ ಹಾರಾಡಬಲ್ಲಳು, ಪುರುಷನಿಗೆ ಸರಿಸಮಾನವಾಗಿ ನಿಂತು ಎಲ್ಲ ಕ್ಷೇತ್ರದಲ್ಲಿಯೂ ತನ್ನದೇ ಛಾಪು ಮೂಡಿಸಿದ್ದಾಳೆ. ಗಣೇಶನ ಮಾತೆಯಾದ ಪಾರ್ವತಿ, ಸಿಂಹವಾಹನೆಯಾದ ದುರ್ಗೆಯಾಗಿ ಇದೀಗ ದೇಶ ರಕ್ಷಣೆಯ ಹೊಣೆಯಲ್ಲಿ ಅಹರ್ನಿಶಿ ತತ್ಪರರಾಗಿರುವ ಸ್ತ್ರೀಯರನ್ನು ಮಹಿಳಾ ದಿನದ ಸಂದರ್ಭದಲ್ಲಿ ನೆನೆಯುತ್ತಿರುವುದು ಸಕಾಲಿಕವಾದುದು ಎಂದು ತಿಳಿಸಿದರು.

ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಆತ್ಮಸ್ಥೈರ್ಯದ ಸಾಕಾರವೇ ಮಹಿಳೆ ಎಂಬ ವಿಷಯ ಕುರಿತ ಪ್ರಬಂಧ ಸ್ಪರ್ಧೆಯ ವಿಜೇತ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಲಾಯಿತು. ಪ್ರಾಚಾರ್ಯರಾದ ಪ್ರೊ. ಉಮೇಶ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ವಿದ್ಯಾರ್ಥಿನಿಯರ ವೇದಿಕೆ ಸಂಚಾಲಕರಾದ ಶ್ರೀಮತಿ ವಾಣಿ ಹಾಗೂ ವ್ಯವಹಾರ ನಿರ್ವಹಣ ಮುಖ್ಯಸ್ಥರಾದ ಶ್ರೀಮತಿ ಎಸ್. ಮಮತರವರು ಉಪಸ್ಥಿತರಿದ್ದರು. □

## ಮಹಿಳೆಯರು ಅನ್ಯಾಯದ ವಿರುದ್ಧ ಧ್ವನಿ ಎತ್ತಬೇಕು




ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನಲ್ಲಿ ದಿನಾಂಕ 8.3.2021ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಲಿಂಗ ಸಮಾನತೆ ಎಂಬ ವಿಷಯ ಕುರಿತು ನಂಜನಗೂಡಿನ ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ. ಮಾಲತಿಯವರು ಮಾತನಾಡುತ್ತಿರುವುದು

ಎಲ್ಲಾ ಮಹಿಳೆಯರು ಅನ್ಯಾಯದ ವಿರುದ್ಧ ಧ್ವನಿ ಎತ್ತಬೇಕು ಎಂದು ನಂಜನಗೂಡು ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ. ಮಾಲತಿಯವರು ಹೇಳಿದರು

ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನಲ್ಲಿ ದಿನಾಂಕ 8.3.2021ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ 'ಲಿಂಗ ಸಮಾನತೆ' ಎಂಬ ವಿಷಯ ಕುರಿತು ಮಾತನಾಡುತ್ತಾ 1909ರ ಫೆಬ್ರವರಿ 28ರಂದು ಅಮೆರಿಕದ ಸಮಾಜವಾದಿ ಪಕ್ಷ ನ್ಯೂಯಾರ್ಕ್‌ನಲ್ಲಿ ಮಹಿಳಾ ಸಮಾವೇಶವನ್ನು ಏರ್ಪಡಿಸಿ, ಅನಾದಿ ಕಾಲದಿಂದಲೂ ಶೋಷಣೆಗೆ ಒಳಗಾಗಿದ್ದ ಮಹಿಳೆಯರ ಸಬಲೀಕರಣ ಸಾರ್ಥಕವಾಗಿಸಬೇಕೆಂಬ ನಿಟ್ಟಿನಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿ ವರ್ಷ ಮಹಿಳಾ ದಿನವನ್ನು ಆಚರಿಸಲು ಕರೆ ನೀಡಿತು. ಸ್ತ್ರೀ ಮತ್ತು ಪುರುಷರನ್ನು ಪರಸ್ಪರ ಪ್ರೀತಿ–ಗೌರವಗಳಿಂದ ಕಾಣುವುದರ ಮೂಲಕ ಲಿಂಗ ಸಮಾನತೆಯ ಭಾವನೆಯನ್ನು ಪ್ರೋತ್ಸಾಹಿಸಬೇಕೆಂದು ಹೇಳಿದರು.

ನಿವೃತ್ತ ಪ್ರಾಧ್ಯಾಪಕರಾದ ಶ್ರೀಮತಿ ಪಿ. ನಿರ್ಮಲ ಹಾಗೂ ಶ್ರೀಮತಿ ಎಸ್.ಎನ್. ನಿರ್ಮಲಾದೇವಿಯವರುಗಳು ಮಹಿಳೆಯರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಮಾತನಾಡಿದರು.

ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಸಿ. ಪಳನಿಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಎನ್. ಸೌಮ್ಯ ಪ್ರಾರ್ಥಿಸಿದರು. ಶ್ರೀಮತಿ ಎಸ್.ಎಂ. ಸುಮ ಸ್ವಾಗತಿಸಿದರು, ಶ್ರೀಮತಿ ಪಿ. ರಾಜಶ್ರೀ ವಂದಿಸಿದರು ಹಾಗೂ ಶ್ರೀಮತಿ ಬಿ. ರೂಪ ಕಾರ್ಯಕ್ರಮವನ್ನು ನಿರೂಪಿಸಿದರು.

☐

## ಶೈಕ್ಷಣಿಕವಾಗಿ ಮಹಿಳೆಯರು ಹೆಚ್ಚು ಬೆಳವಣಿಗೆ ಹೊಂದುತ್ತಿರುವುದು ಸಂತೋಷದಾಯಕ

ಶೈಕ್ಷಣಿಕವಾಗಿ ಮಹಿಳೆಯರು ಹೆಚ್ಚು ಬೆಳವಣಿಗೆ ಹೊಂದುತ್ತಿರುವುದು ಸಂತೋಷದಾಯಕವಾದುದು ಎಂದು ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಮತಿ ದಿವ್ಯ ಸಾರಾ ಥಾಮಸ್ ಹೇಳಿದರು.

ಚಾಮರಾಜನಗರದ ಜೆಎಸ್‌ಎಸ್ ಕಾಲೇಜಿನಲ್ಲಿ ದಿನಾಂಕ 10.3.2021ರಂದು ಆಂತರಿಕ ಗುಣಮಟ್ಟ ಖಾತರಿ ಸಮಿತಿ, ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರೇಂಜರ್ಸ್ ಘಟಕ ಮತ್ತು ಹಿರಿಯ ವಿದ್ಯಾರ್ಥಿನಿಯರ ಸಂಘದ ಸಹಯೋಗದೊಂದಿಗೆ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಪುರುಷ ಮಾತ್ರವಲ್ಲ, ಸ್ತ್ರೀಯರು ಸಹ ಉನ್ನತ ಹುದ್ದೆಗೇರಬಹುದು. ಸಮಾಜದಲ್ಲಿ ಪ್ರತಿಯೊಂದು ಕೆಲಸವನ್ನು ಲಿಂಗಾಧಾರಿತವಾಗಿ ನಿಗದಿಪಡಿಸಲಾಗಿದೆ. ಆದರೆ ಮಹಿಳೆಯರು ಸಹ ಪುರುಷ ಪ್ರಾಬಲ್ಯವೆಂದು ಪರಿಗಣಿಸಲ್ಪಟ್ಟ ಅನೇಕ ಉದ್ಯೋಗಗಳನ್ನು ನಿರ್ವಹಿಸಲು ಸಮರ್ಥರಾಗಿದ್ದಾರೆ. ಉನ್ನತ ಹುದ್ದೆಗೇರಲು ನನಗೆ ನನ್ನ ಕುಟುಂಬವೇ ಸಹಕಾರ ನೀಡಿತು. ವಾಹನ ಚಾಲನೆ, ಅಡುಗೆ ಮಾಡುವುದು, ಕಂಪ್ಯೂಟರ್ ಬಳಕೆ ಮುಂತಾದವುಗಳು ಜೀವನದ ಪ್ರಮುಖ ಕೌಶಲ್ಯಗಳಾಗಿವೆ. ಪ್ರತಿಯೊಬ್ಬರು ಈ ಕೌಶಲ್ಯಗಳನ್ನು ಕಲಿಯಲು ಒಲವು ತೋರಬೇಕು. ಮಹಿಳೆಯರು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಹೊರಹಾಕುವ ಮೂಲಕ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು. ಶೈಕ್ಷಣಿಕವಾಗಿ ಕಾಲೇಜಿನಲ್ಲಿ ದೊರೆಯುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಸಾಧನೆಯ ಹಾದಿಯಲ್ಲಿ ಮುನ್ನಡೆಯಬೇಕು ಎಂದು ತಿಳಿಸಿದರು.

ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ಶ್ರೀ ಆರ್.ಎಂ. ಸ್ವಾಮಿಯವರು ಎಲ್ಲಿ ಸ್ತ್ರೀಯರನ್ನು ಪೂಜಿಸುತ್ತಾರೋ, ಗೌರವಿಸುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ. 12ನೇ ಶತಮಾನದಲ್ಲಿ ಬಸವಣ್ಣನವರು



ಚಾಮರಾಜನಗರದ ಜೆಎಸ್‌ಎಸ್ ಕಾಲೇಜಿನಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಮತಿ ದಿವ್ಯ ಸಾರಾ ಥಾಮಸ್ ಉದ್ಘಾಟಿಸಿದರು

ಸ್ತ್ರೀಯರನ್ನು ಗೌರವಿಸುವಲ್ಲಿ ಮೇಲ್ಪಂಕ್ತಿಯನ್ನೇ ಹಾಕಿ ಕೊಟ್ಟಿದ್ದಾರೆ. ಸರ್ಕಾರವು ಮಹಿಳಾ ಸಬಲೀಕರಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮಹಿಳೆ ತಾಯಿಯಾಗಿ, ಪತ್ನಿಯಾಗಿ ಮನೆಯ ಎಲ್ಲಾ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಾಳೆ. ಒಬ್ಬ ಸೈನಿಕ ದೇಶದ ಗಡಿಯನ್ನು ಹಗಲಿರುಳು ಕಾಯುವಂತೆ ಮಹಿಳೆ ಕುಟುಂಬವನ್ನು ಕಾಯುತ್ತಿದ್ದಾಳೆ. ಎಲ್ಲಾ ಹಂತದಲ್ಲಿಯೂ ಎಲ್ಲಾ ರಂಗದಲ್ಲಿಯೂ ಮಹಿಳೆ ತನ್ನನ್ನು ತಾನು ತೊಡಗಿಸಿಕೊಂಡಿದ್ದಾಳೆ ಎಂದು ತಿಳಿಸಿದರು.

ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಬಿ. ಮಹಾಲಿಂಗಪ್ಪನವರು ನಮ್ಮ ದೇಶವನ್ನು ಕರೆಯುವುದು ಭಾರತಮಾತೆ ಎಂದು. ಪ್ರತಿಯೊಬ್ಬ ಪುರುಷನ ಸಾಧನೆಯ ಹಿಂದೆ ಒಬ್ಬ ಸ್ತ್ರೀ ಇರುತ್ತಾಳೆ. ಇಂದಿನ ನಾಗರಿಕ ಹಾಗೂ ಆರೋಗ್ಯಕರವಾದ ಸಮಾಜದ ನಿರ್ಮಾಣಕ್ಕೆ ಮಹಿಳೆ ಕಾರಣಳಾಗಿದ್ದಾಳೆ ಎಂದು ಹೇಳಿದರು.

ಪ್ರಾಂಶುಪಾಲರಾದ ಶ್ರೀ ಕೆ.ಎಸ್. ಮರಿಸ್ವಾಮಿಯವರು ಆಡು ಮುಟ್ಟದ ಸೊಪ್ಪಿಲ್ಲ ಎಂಬ ನಾಣ್ಣುಡಿಯಂತೆ ಇಂದು ಹೆಣ್ಣು ಮಕ್ಕಳು ಮಾಡದ ಸಾಧನೆಯಿಲ್ಲ. ಮಹಿಳೆ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ನಿಷ್ಠೆಯಿಂದ ಕೆಲಸ ನಿರ್ವಹಿಸುತ್ತಿದ್ದಾಳೆ. ಭಾರತದಲ್ಲಿ ಸ್ತ್ರೀಯರಿಗೆ ಕೊಟ್ಟ ಸ್ಥಾನ ಅಪಾರವಾದದ್ದು. ಸ್ತ್ರೀಯು ಪುರುಷನಿಗೆ ಸರಿಸಮಾನಳಾಗಿ ಸಾಧನೆ ಮಾಡಿದ್ದಾಳೆ. ಮನೆ ಒಳ–ಹೊರಗೆ ದುಡಿಯುವ ಸ್ತ್ರೀಗೆ ಬಿಡುವಿಲ್ಲ. ಸೇವೆಗೆ ಮತ್ತೊಂದು ಹೆಸರೇ ಹೆಣ್ಣು. ಕೋವಿಡ್–19 ಸಂದರ್ಭದಲ್ಲಿ ತಮ್ಮ ಸೇವೆಯ ಮೂಲಕ ಸಾಕಷ್ಟು ಹೆಣ್ಣು ಮಕ್ಕಳು ಪ್ರಶಂಸೆಗೆ ಪಾತ್ರರಾಗಿದ್ದಾರೆ ಎಂದು ತಿಳಿಸಿದರು.

ಹಿರಿಯ ವಿದ್ಯಾರ್ಥಿನಿಯಾದ ಡಾ. ಸಿ.ವಿ. ಸ್ವಾತಿ ನಾಯಕ್‌ರವರನ್ನು ಸನ್ಮಾನಿಸಲಾಯಿತು. ಕು. ಶಾಲಿನಿ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀಮತಿ ಎಲ್.ಎನ್. ಶುಭರವರು ಸ್ವಾಗತಿಸಿದರು. ಡಾ. ಎಂ.ಬಿ. ಸರ್ವಮಂಗಳ ವಂದಿಸಿದರು. ಶ್ರೀಮತಿ ಸಿ. ರೂಪಶ್ರೀ ಕಾರ್ಯಕ್ರಮ ನಿರೂಪಿಸಿದರು.

□

## ಮಹಿಳೆಯರ ಸಾಧನೆಯನ್ನು ಗುರುತಿಸಿ ಗೌರವಿಸಬೇಕು

ಮಹಿಳೆಯರ ಸಾಧನೆಯನ್ನು ಗುರುತಿಸಿ ಗೌರವಿಸಬೇಕು ಎಂದು ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕರು ಮತ್ತು ಜನ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಸುಶೀಲರವರು ಹೇಳಿದರು.

ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ವತಿಯಿಂದ ದಿನಾಂಕ 8.3.2021ರಂದು ಶ್ರೀ ರಾಜೇಂದ್ರ ಭವನದಲ್ಲಿ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಅವರು ಮಾತನಾಡಿದರು. ಈ ದಿನ ಮಹಿಳಾ ಸಾಧಕರನ್ನು ಸ್ಮರಿಸುವ ದಿವಸವಾಗಿದೆ. 1908ರಲ್ಲಿ ನ್ಯೂಯರ್ಕ್‌ನಲ್ಲಿ ಮಹಿಳಾ ದಿನಾಚರಣೆಯನ್ನು ಕಾರ್ಮಿಕರು ಒಗ್ಗೂಡಿ ಆಚರಿಸಲು ಮುಂದಾದರು ಅಂದಿನಿಂದ ಇಂದಿನವರೆಗೆ ಮಾರ್ಚ್ 8 ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಜನರು ಮೌಢ್ಯದಿಂದ ಹೊರಬಂದು ಸಮಾಜದ ಏಳಿಗೆಗೆ ಯೋಚಿಸಬೇಕು. ನಮ್ಮನ್ನು ಬೆಂಬಲಿಸುವ ಅನೇಕ ಪುರುಷರು ಸಮಾಜದಲ್ಲಿದ್ದಾರೆ. ಅವರನ್ನು ಗೌರವಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದು ಹೇಳಿದರು.

ಜನ ಶಿಕ್ಷಣ ಸಂಸ್ಥೆಯಲ್ಲಿ ಕಲಿಕಾರ್ಥಿಗಳಾಗಿ ನಂತರ ಉದ್ಯೋಗದಲ್ಲಿ ತೊಡಗಿಸಿಕೊಂಡು ಇತರರಿಗೂ ಉದ್ಯೋಗ ನೀಡುತ್ತಿರುವ ಶ್ರೀಮತಿ ಪ್ರೇಮ ನಟರಾಜು, ಶ್ರೀಮತಿ ಅಹಲ್ಯಾ ಸುರೇಶ್ ಹಾಗೂ ಶ್ರೀಮತಿ ಸುನಿತ ಮತ್ತು ಶ್ರೀಮತಿ ಕೌಸರ್ ಮತ್ತು ಕು. ಪ್ರಿಯಾರವರುಗಳನ್ನು ಗೌರವಿಸಲಾಯಿತು.

ಜನ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರುಗಳಾದ ಶ್ರೀಮತಿ ಲೀಲಾ ಶಿವಕುಮಾರ್, ಶ್ರೀಮತಿ ಹೇಮಾವತಿ, ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಡಿ.ಎಂ. ಶಶಿಕಲಾ, ಸಂಸ್ಥೆಯ ಸಲಹೆಗಾರರಾದ ಶ್ರೀ ಚನ್ನಬಸಪ್ಪ, ಕಾರ್ಯಕ್ರಮ ಸಹಾಯಕರಾದ ಕು. ಸಿ.ಎಸ್ ಸುಮ, ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಎಂ. ಆಶಾ, ಸಿಬ್ಬಂದಿ ವರ್ಗದವರು ಮತ್ತು ಕಲಿಕಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸಿ ಅವರನ್ನು ಸತ್ಪ್ರಜೆಗಳನ್ನಾಗಿಸುತ್ತದೆ

ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸಿ ಅವರನ್ನು ಸತ್ಪ್ರಜೆಗಳನ್ನಾಗಿಸುತ್ತದೆ ಎಂದು ಕೈಗಾರಿಕಾ ಸಂಪರ್ಕಾಧಿಕಾರಿಗಳಾದ ಶ್ರೀ ಎನ್. ವಿದ್ಯಾಶಂಕರ್‌ರವರು ತಿಳಿಸಿದರು.

ನಂಜನಗೂಡಿನ ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ದಿನಾಂಕ 6.3.2021ರಂದು ರಾಷ್ಟ್ರೀಯ ಸೇವಾ ಯೋಜನೆ ಮತ್ತು ಯುವ ರೆಡ್‌ಕ್ರಾಸ್ ಘಟಕಗಳ ಪ್ರಸಕ್ತ ವರ್ಷದ ಕಾರ್ಯಕ್ರಮಗಳನ್ನು ಉದ್ಘಾಟಿಸಿ ರಾಷ್ಟ್ರೀಯ ಸೇವಾ ಯೋಜನೆಯ ಮೂಲ ಉದ್ದೇಶವೇ ವಿದ್ಯಾರ್ಥಿಗಳನ್ನು ಸಮಾಜ ಹಾಗೂ ದೇಶದ ಏಳಿಗೆಗೆ ಕ್ರಿಯಾತ್ಮಕವಾಗಿ ತೊಡಗಿಸುವುದು. ಅವರಲ್ಲಿ ರಾಷ್ಟ್ರಭಕ್ತಿ, ಸಹಬಾಳ್ವೆ, ಭಾವೈಕ್ಯತೆ, ಉತ್ತಮ ನಾಯಕತ್ವ ಮುಂತಾದ ಗುಣಗಳನ್ನು ಬೆಳಸುವುದಾಗಿದೆ. ಯುವ ರೆಡ್‌ಕ್ರಾಸ್ ಘಟಕದ ಮೂಲಕ ಪ್ರಕೃತಿ ವಿಕೋಪ ಮತ್ತು ಯುದ್ಧದ ಸಂದರ್ಭದಲ್ಲಿ ಶುಶ್ರೂಷೆ ಹಾಗು ಇತರೆ ಸೇವೆಗಳನ್ನು ಒದಗಿಸುವುದು, ಜೊತೆಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು, ರಕ್ತ ನಿಧಿಗಳನ್ನು ಸ್ಥಾಪಿಸಿ, ರಕ್ತದಾನಕ್ಕೆ ಪ್ರೋತ್ಸಾಹಿಸುವುದು, ಅಂಗವಿಕಲರಿಗೆ ಸಲಕರಣೆಗಳನ್ನು ವಿತರಿಸುವುದು ಹಾಗೂ ಸಾಮಾಜಿಕ ಜಾಗೃತಿ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಾನವೀಯ ಸೇವಾ ಸೌಕರ್ಯಗಳನ್ನು ಒದಗಿಸುವುದಾಗಿದೆ ಎಂದು ಹೇಳಿದರು.

ಪ್ರಾಂಶುಪಾಲರಾದ ಶ್ರೀ ವೈ.ಎಂ. ಸಾಸಲಾರಾಧ್ಯ, ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿಗಳಾದ ಶ್ರೀ ಎಂ.ಆರ್. ವಿಶ್ವನಾಥ್ ಮತ್ತು ಯುವ ರೆಡ್‌ಕ್ರಾಸ್ ಘಟಕದ ಕಾರ್ಯಕ್ರಮಾಧಿಕಾರಿಗಳಾದ ಶ್ರೀ ಹೆಚ್.ಎನ್. ನಿರಂಜನಮೂರ್ತಿ ಉಪಸ್ಥಿತರಿದ್ದರು.

## ಮಹಿಳೆಯರು ಹವ್ಯಾಸಗಳನ್ನು ಮರೆಯಬಾರದು




ಮಹಿಳೆಯರು ತಮ್ಮ ಹವ್ಯಾಸಗಳನ್ನು ಮರೆಯಬಾರದು ಎಂದು ವಿಶ್ರಾಂತ ಪ್ರಾಧ್ಯಾಪಕರಾದ ಶ್ರೀಮತಿ ಭುವನೇಶ್ವರಿ ಹೆಗಡೆಯವರು ಹೇಳಿದರು.

ಬೆಂಗಳೂರಿನ ಜಯನಗರದ ಜೆಎಸ್‌ಎಸ್ ಶಿಕ್ಷಣ ಸಮುಚ್ಚಯದಲ್ಲಿ ದಿನಾಂಕ 18.3.2021 ರಂದು ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡುತ್ತಾ ಕಾಲೇಜಿನಲ್ಲಿ ಪ್ರತಿಭಾವಂತರಾಗಿದ್ದ ಹೆಣ್ಣು ಮಕ್ಕಳು ಮದುವೆಯಾದ ಕೂಡಲೆ ತಮ್ಮ ಹವ್ಯಾಸಗಳನ್ನು ಬಿಟ್ಟು ಬಿಡುತ್ತಾರೆ. ವಿದ್ಯಾರ್ಥಿ ಬದುಕಿನಾಚೆಗೂ ಮಹಿಳೆಯರು ತಮ್ಮೊಳಗಿನ ಹವ್ಯಾಸಗಳನ್ನು ಸಂತಸವನ್ನು ಜಾಗೃತಗೊಳಿಸಿ ನಗುತ್ತಾ ಜೀವನ ಸಾಗಿಸಬೇಕೆಂದು ತಿಳಿಸಿದರು.

ಸಂಯೋಜಕರಾದ ಶ್ರೀಮತಿ ಆರ್. ಜಯಕುಮಾರಿಯವರು ಇಂದಿಗೂ ಸಹ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿ ಮುಂದುವರಿಯುತ್ತಿಲ್ಲ. ಈಗಲೂ ಸಹ ಸ್ತ್ರೀಯರು ಎರಡನೇ ದರ್ಜೆ ನಾಗರಿಕರು ಎಂದೇ ಪರಿಗಣಿಸಲಾಗಿದೆ. ಪುರುಷರಿಗೆ ಸಮಾನವಾಗಿ ಮಹಿಳೆ ಮುಂದುವರಿಯಬೇಕಾದರೆ ಆಕೆಗೆ ಪ್ರೋತ್ಸಾಹ ನೀಡಬೇಕು. ಈ ನಿಟ್ಟಿನಲ್ಲಿ ಪೋಷಕರು, ಶಿಕ್ಷಕರು ಮತ್ತು ಸಮಾಜ ಹೆಣ್ಣುಮಕ್ಕಳಿಗೆ ಉತ್ತೇಜನ ನೀಡಬೇಕು ಎಂದು ತಿಳಿಸಿದರು.

ಜೆ.ಪಿ. ನಗರದ ಪ್ರೈಮರಿ ಹೆಲ್ತ್ ಸೆಂಟರ್‌ನ ಲ್ಯಾಬ್ ಟೆಕ್ನಿಷಿಯನ್, ಕೋವಿಡ್ ವಾರಿಯರ್ ಶ್ರೀಮತಿ ಗಂಗಾಬಾಯಿ ಹಾಗೂ ಪತ್ರಿಕಾ ವಿತರಣಾ ಕಾರ್ಯವನ್ನು ವಹಿಸಿಕೊಂಡು, ಕುಟುಂಬ ನಿರ್ವಹಣೆ ಮಾಡುತ್ತಾ ಟೆಲಿಕಮ್ಯೂನಿಕೇಷನ್ ಇಂಜಿನಿಯರಿಂಗ್ ಓದುತ್ತಿರುವ ಕು. ಲಾವಣ್ಯ ಮತ್ತು ಪ್ರಾಥಮಿಕ ಶಾಲೆಯಲ್ಲಿ ಸುಮಾರು 40 ವರ್ಷಗಳ ಕಾಲ ಸೇವೆ ಸಲ್ಲಿಸಿದ ಆಯಾ ಶ್ರೀಮತಿ ಮುನಿವೆಂಕಟಮ್ಮನವರನ್ನು ಸನ್ಮಾನಿಸಲಾಯಿತು. ಶ್ರೀಮತಿ ರೇವತಿ ಸ್ವಾಗತಿಸಿದರು. ಶ್ರೀಮತಿ ಡಿ.ಆರ್. ಕಾತ್ಯಾಯಿನಿ ಪರಿಚಯಿಸಿದರು. ಶ್ರೀ ಶಿವರಾಜುರವರು ವಂದಿಸಿದರು. ಶ್ರೀಮತಿ ಆರತಿ ನಿರೂಪಿಸಿದರು.

□

## ವೈದ್ಯಕೀಯ ತ್ಯಾಜ್ಯ ನಿರ್ವಹಣೆ ಕುರಿತು ಉಪನ್ಯಾಸ

ಮೈಸೂರಿನ ಜೆಎಸ್‌ಎಸ್ ನರ್ಸಿಂಗ್ ಶಾಲೆಯ ವತಿಯಿಂದ ಶ್ರೀ ರಾಜೇಂದ್ರ ಭವನದಲ್ಲಿ ದಿನಾಂಕ 6.3.2021ರಂದು ವೈದ್ಯಕೀಯ ತ್ಯಾಜ್ಯ ನಿರ್ವಹಣೆ ಎಂಬ ವಿಷಯ ಕುರಿತು ಉಪನ್ಯಾಸವನ್ನು ಆಯೋಜಿಸಲಾಗಿತ್ತು.

ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಮೈಕ್ರೋಬಯಾಲಜಿ ವಿಭಾಗದ ಪ್ರಾಧ್ಯಾಪಕರಾದ ಡಾ. ಜಿ.ಎಸ್. ಸೌಮ್ಯರವರು ಬಯೋ ಮೆಡಿಕಲ್ ತ್ಯಾಜ್ಯ, ಅದರ ವಿಧಗಳು ಮತ್ತು ವಿಲೇವಾರಿ ಹಾಗೂ ಕೋವಿಡ್–19 ವಾರ್ಡ್‌ಗಳಿಂದ ಬರುವ ತ್ಯಾಜ್ಯದ ನಿರ್ವಹಣೆಯ ಬಗ್ಗೆ ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಶುಶ್ರೂಷ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿ ಹಾಗು ಶ್ರೀಮತಿ ಎನ್. ಪ್ರಿಯರಂಜನಿ ಮತ್ತು ಶ್ರೀಮತಿ ಹೆಚ್.ಎಸ್. ಮಾನಸರವರು ಉಪಸ್ಥಿತರಿದ್ದರು.

## 'ಶಿವರಾತ್ರೀಶ್ವರ ಇಕೋ ಕ್ಲಬ್' ಉದ್ಘಾಟನೆ



ಸಂತೇಮರಹಳ್ಳಿಯ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 'ಶಿವರಾತ್ರೀಶ್ವರ ಇಕೋ ಕ್ಲಬ್' ಅನ್ನು ಸಮೂಹ ಸಂಪನ್ಮೂಲ ಅಧಿಕಾರಿಗಳಾದ ಶ್ರೀ ರವಿಕುಮಾರ್‌ರವರು ಆವರಣದಲ್ಲಿ ಸಸಿ ನೆಡುವುದರ ಮೂಲಕ ಉದ್ಘಾಟಿಸಿದರು

ವಿದ್ಯಾರ್ಥಿಗಳು ಗಿಡ–ಮರಗಳ ಪಾಲನೆ ಪೋಷಣೆಯ ಬಗ್ಗೆ ಹೆಚ್ಚು ಗಮನ ವಹಿಸಬೇಕು ಎಂದು ಸಮೂಹ ಸಂಪನ್ಮೂಲ ಅಧಿಕಾರಿಗಳಾದ ಶ್ರೀ ರವಿಕುಮಾರ್‌ರವರು ಹೇಳಿದರು.

ಸಂತೇಮರಹಳ್ಳಿಯ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿನಾಂಕ 3.3.2021ರಂದು ರಾಷ್ಟ್ರೀಯ ಹಸಿರು ಪಡೆ ವತಿಯಿಂದ 'ಶಿವರಾತ್ರೀಶ್ವರ ಇಕೋ ಕ್ಲಬ್' ಅನ್ನು ಶಾಲಾ ಆವರಣದಲ್ಲಿ ಸಸಿ ನೆಡುವ ಮೂಲಕ ಉದ್ಘಾಟಿಸಿ ಒಂದೊಂದು ಸಸಿಯನ್ನು ದತ್ತು ಸ್ವೀಕರಿಸಿ ಅದರ ಪೋಷಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು.

ಹಿರಿಯ ಶಿಕ್ಷಕರಾದ ಶ್ರೀಮತಿ ಎನ್. ಲೋಕಮ್ಮಣ್ಣಿ ವೃಕ್ಷಗಳು ದೈವಿಕ ಅಂಶಗಳನ್ನು ಹೊಂದಿವೆ. ಔಷಧೀಯ ಗುಣಗಳನ್ನು ಹೊಂದಿವೆ. ಅವುಗಳನ್ನು ಸರಿಯಾಗಿ ಬೆಳೆಸಿ ಉಳಿಸಿಕೊಳ್ಳಬೇಕು ಎಂದು ಹೇಳಿದರು. ಮುಖ್ಯೋಪಾಧ್ಯಾಯರಾದ ಶ್ರೀ ವೈ.ಪಿ. ವಿಶ್ವರವರು ಕಸದಿಂದ ರಸವಾಗುವ ರೀತಿಯಲ್ಲಿ ನೀರಿನ ಬಳಕೆ ಮಾಡುವುದರ ಜೊತೆಗೆ ನೀರು ಹರಿಯುವ ಜಾಗದಲ್ಲಿ ಒಂದು ಗಿಡವನ್ನು ಬೆಳೆಸಬೇಕು. ಸಾಲುಮರದ ತಿಮ್ಮಕ್ಕನನ್ನು ಆದರ್ಶವಾಗಿಟ್ಟುಕೊಳ್ಳಬೇಕು ಎಂದು ತಿಳಿಸಿದರು.

ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎ.ಜಿ. ಮರಿಸ್ವಾಮಿಯವರು ನಗರ ಪ್ರದೇಶಗಳಲ್ಲಿ

ಮಾಲಿನ್ಯ ದಿನದಿನಕ್ಕೂ ಹೆಚ್ಚುತ್ತಿದೆ. ಗ್ರಾಮೀಣ ಭಾಗದಲ್ಲಿರುವ ಜನರು ಉತ್ತಮ ಆರೋಗ್ಯದಿಂದ ಇರಲು ಕಾರಣವೇ ಮಾಲಿನ್ಯ ಮುಕ್ತ ಪರಿಸರವೆಂದು ತಿಳಿಸಿದರು.

ಶ್ರೀಮತಿ ಅಭಿಲಾಷ ಪ್ರಾರ್ಥಿಸಿದರು. ಶ್ರೀ ಮಹೇಶ್ ಸ್ವಾಗತಿಸಿದರು. ಶ್ರೀಮತಿ ದೀಪಿಕಾ ವಂದಿಸಿದರು. ಶ್ರೀ ಕಾಂತರಾಜುರವರು ಕಾರ್ಯಕ್ರಮವನ್ನು ನಿರೂಪಿಸಿದರು.

## ವಿಶೇಷಚೇತನರು ದೇವರ ಮಕ್ಕಳು

ವಿಶೇಷಚೇತನರು ದೇವರ ಮಕ್ಕಳು ಎಂದು ಚಲನಚಿತ್ರ ಕಲಾವಿದರಾದ ಶ್ರೀ ದರ್ಶನ್ ತೂಗುದೀಪರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನಲ್ಲಿ ದಿನಾಂಕ 4.3.2021ರಂದು ರೋಟರಿ ಮೈಸೂರು ಪಶ್ಚಿಮ ಮತ್ತು ಭಾಮೀಸ್ ಫೌಂಡೇಷನ್ ಸಹಯೋಗದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಮಾತನಾಡುತ್ತಾ ನಿಮ್ಮನ್ನು ನೋಡಿದರೆ ದೇವರನ್ನೇ ನೋಡಿದಂತಾಗುತ್ತದೆ. ಪ್ರತಿಯೊಬ್ಬರು ಚೆನ್ನಾಗಿ ಓದಿ ಅತೀ ಹೆಚ್ಚು ಅಂಕ ಪಡೆದು ಉನ್ನತ ಹುದ್ದೆಯನ್ನು ಪಡೆಯಿರಿ. ವಿಶೇಷಚೇತನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಈ ಸಂಸ್ಥೆಗೆ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ನನಗೆ ತುಂಬಾ ಸಂತೋಷವಾಗುತ್ತಿದೆ ಎಂದು ತಿಳಿಸಿದರು.

ಅತಿಹೆಚ್ಚು ಅಂಕಪಡೆದ ಕು. ಆರ್. ಪೂಜಾ, ಕು. ಹೆಚ್.ಬಿ. ಪ್ರಿಯ, ಕು. ದಾಸರೀ ಅಭಿಷೇಕ್, ಕು. ಬೀರಪ್ಪ, ಕು. ಎಸ್. ರಜಿನಿ, ಕು. ಕೋಟೇಶ್ ಅವರಿಗೆ ವಿದ್ಯಾರ್ಥಿವೇತನ ನೀಡಲಾಯಿತು. ರೋಟರಿ ಪಶ್ಚಿಮ ಸಂಸ್ಥೆಯ ಅಧ್ಯಕ್ಷರಾದ ಡಾ. ರಾಘವೇಂದ್ರ ಪ್ರಸಾದ್, ಭಾಮೀಸ್ ಫೌಂಡೇಷನ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಮಲ್ಲಿಕಾರ್ಜುನ್, ಪ್ರಾಂಶುಪಾಲರಾದ ಶ್ರೀ ಬಿ. ಇಳಂಗೋವನ್ ಉಪಸ್ಥಿತರಿದ್ದರು. ಕು. ಜಯಶೀಲ ಪ್ರಾರ್ಥಿಸಿದರು. ಡಾ. ಎಸ್. ಉಮಾ ಸ್ವಾಗತಿಸಿದರು. ಶ್ರೀಮತಿ ಸಿ. ಕಾವ್ಯರವರು ವಂದಿಸಿದರು. ಡಾ. ಪಳನಿಸ್ವಾಮಿ ಮೂಡುಗೂರು ನಿರೂಪಿಸಿದರು.

## ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೌಶಲ್ಯಕ್ಕೆ ಮಹತ್ವದ ಸ್ಥಾನವಿದೆ

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೌಶಲ್ಯಕ್ಕೆ ಮಹತ್ವದ ಸ್ಥಾನವಿದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ತಾಂತ್ರಿಕ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕರಾದ ಡಾ. ಹೆಚ್.ಆರ್. ಮಹದೇವಸ್ವಾಮಿ ತಿಳಿಸಿದರು.

ನಂಜನಗೂಡಿನ ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ದಿನಾಂಕ 13.03.2021ರಂದು ಏಷಿಯನ್ ಪೈಂಟ್ಸ್ ಲಿಮಿಟೆಡ್ ಸಹಯೋಗದೊಂದಿಗೆ ನಡೆದ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಈಗಿನ ಪರಿಸ್ಥಿತಿಯಲ್ಲಿ ಕೈಗಾರಿಕೆಯನ್ನು ನಡೆಸಲು ಹಲವಾರು ತೊಡಕುಗಳಿವೆ. ಅಲ್ಲಿ ಕಾರ್ಯನಿರ್ವಹಿಸುವ ನೌಕರವರ್ಗದವರು ಆಡಳಿತಮಂಡಳಿಯ ಜೊತೆಗೂಡಿ ಸೌಹಾರ್ದತೆಯಿಂದ ತೊಡಕುಗಳನ್ನು ನಿವಾರಿಸಿಕೊಂಡು ಕೈಗಾರಿಕೆಗಳ ಅಭಿವೃದ್ಧಿ ಕಡೆ ಗಮನಹರಿಸಬೇಕು. ಪ್ರಸ್ತುತ ಸ್ಥಿತಿಯಲ್ಲಿ ಹೆಚ್ಚಿನ ಸ್ಪರ್ಧೆ ಇರುವುದರಿಂದ ಕೈಗಾರಿಕೆಯ ಬೇಡಿಕೆಗೆ ಬೇಕಾದ ಕೌಶಲ್ಯವನ್ನು ಹಂತ ಹಂತವಾಗಿ ಕಲಿತುಕೊಳ್ಳಬೇಕು ಎಂದು ತಿಳಿಸಿದರು.

ಇವರ್ಮಾವು ಏಷಿಯನ್ ಪೈಂಟ್ಸ್ ಲಿಮಿಟೆಡ್‌ನ ಹಿರಿಯ ವ್ಯವಸ್ಥಾಪಕರಾದ ಶ್ರೀ ರಾಜೇಶ್ ಗುರುಮೂರ್ತಿ, ಪ್ರಾಂಶುಪಾಲರಾದ ಶ್ರೀ ವೈ.ಎಂ. ಸಾಸಲಾರಾಧ್ಯ ಉಪಸ್ಥಿತರಿದ್ದರು. ಶ್ರೀ ಎಸ್. ಶಿವಶಂಕರ ವಂದಿಸಿದರು. ಶ್ರೀ ಹೆಚ್.ಎನ್. ಮಂಜುನಾಥ ಕಾರ್ಯಕ್ರಮವನ್ನು ನಿರೂಪಿಸಿದರು.

## ಸತತ ಅಧ್ಯಯನವೇ ಉತ್ತಮ ಸಂಶೋಧನೆಗೆ ದಾರಿ



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಐಕ್ಯೂಎಸಿ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಆಯೋಜಿಸಿದ್ದ 'ಸಂಶೋಧನಾ ವಿಧಾನ' ವಿಷಯ ಕುರಿತ ರಾಜ್ಯಮಟ್ಟದ ಕಾರ್ಯಾಗಾರವನ್ನು ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾದ ಪ್ರೊ. ಎ.ಪಿ. ಜ್ಞಾನಪ್ರಕಾಶ್ ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು

ಸಂಶೋಧನೆಯಲ್ಲಿ ಓದು ಅತಿ ಮುಖ್ಯ, ಕನಿಷ್ಠ ನೂರು ಸಂಶೋಧನೆ ಪ್ರಬಂಧಗಳನ್ನು ಓದಿದಾಗ ಮಾತ್ರವೇ ಸಂಶೋಧನೆಯ ಬರಹ ಮತ್ತು ವಿಧಾನ ಗ್ರಹಿಸಲು ಸಾಧ್ಯ. ಸತತ ಅಧ್ಯಯನವೇ ಉತ್ತಮ ಸಂಶೋಧನೆಗೆ ದಾರಿ ಎಂದು ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾದ ಪ್ರೊ. ಎ.ಪಿ. ಜ್ಞಾನಪ್ರಕಾಶ್ ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಐಕ್ಯೂಎಸಿ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ದಿನಾಂಕ 13.3.2021ರಂದು ಸಂಶೋಧಕರು ಮತ್ತು ಮಾರ್ಗದರ್ಶಕರಿಗಾಗಿ ನಡೆದ 'ಸಂಶೋಧನಾ ವಿಧಾನ' ವಿಷಯ ಕುರಿತ ರಾಜ್ಯಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಸಂಶೋಧನೆಯು ಇಂದು ವಿಸ್ತಾರಗೊಳ್ಳುತ್ತಿದೆ. ಆದರೂ ನಿರೀಕ್ಷಿತ ಮಟ್ಟವನ್ನು ಮುಟ್ಟಲಾಗುತ್ತಿಲ್ಲ. ಸಂಶೋಧನೆ ನಡೆಯುವಾಗ ಉತ್ತಮವಾದ ಲೇಖನಗಳು ಪ್ರಕಟಗೊಳ್ಳಬೇಕು. ಅವುಗಳಿಂದ ಸಮಾಜಕ್ಕೆ ಉಪಯೋಗವಾಗಬೇಕು. ಅಧ್ಯಯನ ಸರಿದಾರಿಯಲ್ಲಿ ಸಾಗಿದಷ್ಟು ಉತ್ತಮ ಸಂಶೋಧನೆ ಹೊರಬರಲು ಸಾಧ್ಯ. ಸಂಶೋಧಕರು ತಿಂಗಳಿಗೊಮ್ಮೆಯಾದರೂ ಅದುವರೆಗೆ ನಡೆಸಿದ ಅಧ್ಯಯನ ಮುಂದೆ ನಡೆಸಬೇಕಾದ ಸಂಶೋಧನೆಯ ಬಗ್ಗೆ ಮನನ ಮಾಡಿಕೊಳ್ಳುತ್ತಿರಬೇಕು. ಹಾಕಿಕೊಂಡ ಯೋಜನೆಯಂತೆ ಗುರಿ ತಲುಪಲು ಕಾರ್ಯಪ್ರವೃತ್ತರಾಗಬೇಕು. ಇಂತಹ ಕಾರ್ಯಕ್ರಮಗಳಿಂದ ಸಂಶೋಧನೆಯ ಗೊತ್ತು ಗುರಿಗಳು ಸ್ಪಷ್ಟವಾಗುತ್ತವೆ ಎಂದು ಹೇಳಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡಿ ಯಾವುದೇ ದೇಶ ಆರ್ಥಿಕವಾಗಿ ಸಬಲಗೊಳ್ಳಲು, ಸಮಾಜ ಉನ್ನತ ಸ್ಥಿತಿಗೆ ಏರಲು ಸಂಶೋಧನೆ ಅಂತೆಯೇ ಜ್ಞಾನ ಸೃಷ್ಟಿ ಅತ್ಯಂತ ಅವಶ್ಯಕವಾದುದು. ಜಗತ್ತಿನಲ್ಲಿ ಇಂದು ಎಲ್ಲಾ ಕ್ಷೇತ್ರಗಳಲ್ಲೂ ತ್ವರಿತ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಜೊತೆಗೆ ಜಾಗತಿಕವಾಗಿ ಅನೇಕ ಸವಾಲುಗಳನ್ನು ಪ್ರತಿದಿನ ಎದುರಿಸುತ್ತಿದ್ದೇವೆ. ಹೀಗೆ ಬದಲಾಗುತ್ತಿರುವ ಜಾಗತಿಕ

ವ್ಯವಸ್ಥೆಗೆ ಅನುಗುಣವಾಗಿ ನಮ್ಮ ದೇಶವು ಸಾಗಬೇಕಾದರೆ ಸಂಶೋಧನಾ ಕ್ಷೇತ್ರ ವ್ಯಾಪಕಗೊಳ್ಳಬೇಕು. ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆಗಳು ನಡೆಯಬೇಕು. ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಈ ಪ್ರಮಾಣ ಕಡಿಮೆಯಿದೆ. ವಿಜ್ಞಾನದಂತೆ ಇತರೆ ಕ್ಷೇತ್ರಗಳಲ್ಲಿಯೂ ಸಂಶೋಧನೆ ವ್ಯಾಪಕವಾಗಿ ನಡೆದು ಮಾನವ ಪ್ರಗತಿಗೆ ಸಹಾಯಕವಾಗಲಿ ಎಂದರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಎನ್.ಎಸ್. ತಾರಾನಾಥ್‌ರವರು 'ಸಂಶೋಧನಾ ಸ್ವರೂಪ' ಕುರಿತು ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಸಂಖ್ಯಾಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ರವಿಯವರು 'ಸಂಶೋಧನಾ ವಿಧಾನ–ಸಂಖ್ಯಾಶಾಸ್ತ್ರ ಮೌಲ್ಯಮಾಪನ' ವಿಷಯ ಕುರಿತು ಮಾತನಾಡಿದರು. ಪ್ರಾಂಶುಪಾಲರಾದ ಡಾ. ಹೆಚ್.ಸಿ. ಹೊನ್ನಪ್ಪ ಸ್ವಾಗತಿಸಿದರು. ಶ್ರೀಮತಿ ಎಂ. ಗೀತಾ ಪ್ರಾರ್ಥಿಸಿದರು. ಡಾ. ಎನ್. ರಾಜೇಂದ್ರಪ್ರಸಾದ್ ನಿರೂಪಿಸಿ, ವಂದಿಸಿದರು.

□

## ಶ್ರೀ ಶಿವರಾತ್ರೀಶ್ವರ ಇಕೋ ಕ್ಲಬ್ ಕಾರ್ಯಕ್ರಮಗಳ ಸಮಾರೋಪ



ಗುಂಡ್ಲುಪೇಟೆ ಬರಗಿಯ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ದಿನಾಂಕ 29.03.2021ರಂದು ಶ್ರೀ ಶಿವರಾತ್ರೀಶ್ವರ ರಾಷ್ಟ್ರೀಯ ಹಸಿರು ಪಡೆ ವತಿಯಿಂದ 2020–21ನೇ ಸಾಲಿನಲ್ಲಿ ಇಕೋ ಕ್ಲಬ್ ಕಾರ್ಯಕ್ರಮಗಳ ಸಮಾರೋಪವು ನಡೆಯಿತು.

ಮುಖ್ಯಶಿಕ್ಷಕರಾದ ಶ್ರೀ ಎಂ. ಶಾಂತಮೂರ್ತಿ ಶಾಲೆಯಲ್ಲಿ ಮುಂದಿನ ದಿನಗಳು ಇಕೋ ಕ್ಲಬ್‌ನ ವತಿಯಿಂದ ಮತ್ತಷ್ಟು ಹೊಸ ಹೊಸ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಮಕ್ಕಳು ಮತ್ತು ಸಮುದಾಯದಲ್ಲಿ ಪರಿಸರ ಪ್ರಜ್ಞೆ, ಸ್ವಚ್ಚತೆಯ ಅರಿವು, ಕೋವಿಡ್ 19ರ ಬಗ್ಗೆ ಜಾಗೃತಿ ಕಾಳಜಿ ಮೂಡಿಸಲಾಗಿದೆ. ಪರಿಸರ ತುಂಬಾ ಉತ್ತಮವಾಗಿ ನಿರ್ಮಾಣವಾಗಿದ್ದು ಮಕ್ಕಳ ಕಲಿಕೆಯ ಮೇಲೂ ಪ್ರಭಾವ ಬೀರಿದೆ. ಈ ರೀತಿಯ ಕಾರ್ಯಕ್ರಮಗಳಿಂದ ಮಕ್ಕಳಲ್ಲಿ ಪರಿಸರ ಜಾಗೃತಿ ಮೂಡುತ್ತದೆ. ವಿದ್ಯಾರ್ಥಿಗಳು ಇಕೋ ಕ್ಲಬ್‌ನ ಕಾರ್ಯಕ್ರಮಗಳಾದ ಗಿಡ ನೆಡುವುದು, ಧಾನ್ಯಗಳ ಸಂಗ್ರಹ, ಸಿರಿಧಾನ್ಯಗಳ ಸಂಗ್ರಹ, ವನ್ಯಜೀವಿ ಸಪ್ತಾಹ, ಹೊರ ಸಂಚಾರ, ಚಿತ್ರಕಲೆ, ರಸಪ್ರಶ್ನೆ ಮುಂತಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮತಮ್ಮ ಅನುಭವಗಳು ಹಂಚಿಕೊಂಡಿದ್ದಾರೆ. ತಾವು ಪಡೆದ ಜ್ಞಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರ ಜೊತೆಗೆ ಕುಟುಂಬದದವರಿಗೂ ತಿಳಿಸಿದ್ದಾರೆ ಎಂದರು.

ಸಂಯೋಜಕರಾದ ಶ್ರೀ ಬಿ.ಎಂ. ಮಹದೇವಪ್ರಸಾದ್. ಸಹಶಿಕ್ಷಕರು ಮತ್ತು ಮಕ್ಕಳು ಹಾಜರಿದ್ದರು.

## ಉತ್ತಮ ಸಮಾಜದ ಕನಸನ್ನು ಜ್ಞಾನದಿಂದ ಸಾಕಾರಗೊಳಿಸಿ




ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನಲ್ಲಿ ನಡೆದ 'ಅಭಿವಿನ್ಯಾಸ' ಕಾರ್ಯಕ್ರಮವನ್ನು ಮೈಸೂರು ವಿವಿ ಕುಲಪತಿಗಳಾದ ಪ್ರೊ. ಜಿ. ಹೇಮಂತ್‌ಕುಮಾರ್‌ರವರು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಎಸ್.ಪಿ. ಮಂಜುನಾಥ್, ಪ್ರೊ. ಬಿ.ವಿ. ಸಾಂಬಶಿವಯ್ಯ, ಡಾ. ಹೆಚ್.ಸಿ. ಹೊನ್ನಪ್ಪರವರುಗಳಿದ್ದಾರೆ

ಓದುವ ಹಂಬಲವಿದ್ದರೂ ಹಿಂದೆ ಜ್ಞಾನದ ಲಭ್ಯತೆಯು ಕಡಿಮೆಯಿತ್ತು. ಆದರೆ ಇಂದು ಎಲ್ಲೆಡೆ ನಾನಾ ಮೂಲಗಳಿಂದ ಜ್ಞಾನವನ್ನು ಪಡೆಯಬಹುದಾಗಿದೆ. ನಮ್ಮಲ್ಲಿ ಓದುವ ಹಂಬಲವಿರಬೇಕಷ್ಟೇ. ಓದು ಮತ್ತು ಅಧ್ಯಯನವವನ್ನು ಸದುಪಯೋಗಪಡಿಸಿಕೊಳ್ಳಬೇಕು. ಜ್ಞಾನದಿಂದ ಮಾತ್ರವೇ ಉತ್ತಮ ಸಮಾಜದ ಕನಸನ್ನು ಸಾಕಾರಗೊಳಿಸಲು ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಜಿ. ಹೇಮಂತ್‌ಕುಮಾರ್‌ರವರು ಹೇಳಿದರು.

ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನಲ್ಲಿ ದಿನಾಂಕ 19.3.2021ರಂದು ಸ್ನಾತಕೋತ್ತರ ಪದವಿ ವಿಭಾಗಕ್ಕೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗಾಗಿ ನಡೆದ 'ಅಭಿವಿನ್ಯಾಸ' ಕಾರ್ಯಕ್ರಮವನ್ನು ಉದ್ಘಾಟಿಸಿ ದೀಕ್ಷಾರಂಭ ಎಂಬ ಹೆಸರೇ ಸೂಚಿಸುವಂತೆ ಉನ್ನತ ಶಿಕ್ಷಣಕ್ಕೆ ಇದು ನಾಂದಿಯಾಗಿದೆ. ಶಿಕ್ಷಣವು ಇಂದು ಎಲ್ಲರಿಗೂ ಅಗತ್ಯವಾಗಿದೆ. ಮಠಮಾನ್ಯಗಳು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸುತ್ತಿರುವ ಸೇವೆಯಿಂದ ಇಂದು ಎಲ್ಲರೂ ಶಿಕ್ಷಣ ಪಡೆಯುವಂತಾಗಿದೆ. ಈ ಕಾಲೇಜು ಹದಿನಾಲ್ಕು ಸ್ನಾತಕೋತ್ತರ ವಿಭಾಗಗಳನ್ನು ಹೊಂದಿದ್ದು ಒಂದು ವಿಶ್ವವಿದ್ಯಾಲಯದಂತೆಯೇ ಬೋಧನೆ ಮತ್ತು ಸಂಶೋಧನೆಗೆ ಒತ್ತು ನೀಡಲಾಗಿದೆ. ಇಂದು ಔದ್ಯೋಗಿಕ ಕ್ಷೇತ್ರಕ್ಕೆ ಕೌಶಲ್ಯಾಧಾರಿತ ಶಿಕ್ಷಣದ ಅವಶ್ಯಕತೆ ಇದೆ. ಆದ್ದರಿಂದ ಆಳವಾದ, ಕೌಶಲ್ಯಯುತ ಶಿಕ್ಷಣ ಪಡೆಯಬೇಕು ಎಂದು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್‌ರವರು ಪರಮಪೂಜ್ಯ ರಾಜೇಂದ್ರ ಶ್ರೀಗಳವರು ಶಿಕ್ಷಣಕ್ಷೇತ್ರದ ಸಮಸ್ಯೆಗಳನ್ನು ಕಣ್ಣಾರೆ ಕಂಡು ಅಂತರಾತ್ಮದಿಂದ ಆಲೋಚಿಸಿದವರು.

ಅದರಲ್ಲಿಯೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗದಂತೆ ಜ್ಞಾನದಾಸೋಹದ ಜೊತೆಗೆ ಅನ್ನದಾಸೋಹದ ವ್ಯವಸ್ಥೆ ಮಾಡಿದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಎಲ್ಲರೂ ನಡೆಯಬೇಕು. ಇಂದು ನಾವೆಲ್ಲಾ ಸ್ಪರ್ಧಾತ್ಮಕ ಯುಗದಲ್ಲಿದ್ದೇವೆ. ಅದಕ್ಕೆ ಪೂರಕವಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠವು ತರಬೇತಿ ಕೇಂದ್ರಗಳನ್ನು ತೆರೆದಿದೆ. ಅದರ ಸದುಪಯೋಗ ಪಡೆದುಕೊಂಡು ಉನ್ನತ ಉದ್ಯೋಗ ಪಡೆಯಲು ಪ್ರಯತ್ನಿಸಬೇಕು ಎಂದರು.

ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ನಮ್ಮ ಕಾಲೇಜು ಹಲವು ಸ್ಥಾನಮಾನಗಳನ್ನು ಹೊಂದಿದೆ. ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ. ಕಾಲೇಜಿನ ಆವರಣದಲ್ಲಿ ಸಮುದಾಯ ಬಾನುಲಿ 'ಜೆಎಸ್‌ಎಸ್ ರೇಡಿಯೋ 91.2 ಮೆಗಾಹರ್ಟ್ಜ್' ಕೇಂದ್ರವು ಶೀಘ್ರದಲ್ಲಿಯೇ ಪ್ರಾರಂಭವಾಗುವುದು. ವಿವಿಧ ವಿಷಯಗಳಲ್ಲಿ ಸಂಶೋಧನೆಗೆ ಅವಕಾಶವಿದ್ದು, ಸಂಶೋಧನಾ ಕೇಂದ್ರವನ್ನು ತೆರೆಯಲಾಗಿದೆ. ಅಧ್ಯಯನಕ್ಕೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ. ಇಂದಿನ ಔದ್ಯೋಗಿಕ ಕ್ಷೇತ್ರಕ್ಕೆ ಬೇಕಾದ ಕೌಶಲ್ಯಯುತ ಶಿಕ್ಷಣವನ್ನು ಒದಗಿಸಲಾಗಿದೆ. ವಿದ್ಯಾರ್ಥಿಗಳು ಇಲ್ಲಿನ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಪೋಷಕರ ಮತ್ತು ಸಮಾಜದ ಆಶಯವನ್ನು ಸಾಕಾರಗೊಳಿಸಬೇಕು ಎಂದು ತಿಳಿಸಿದರು

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ, ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಆರ್.ಎಂ. ಚಿಂತಾಮಣಿ, ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಡಾ. ಬಿ. ಪ್ರಭುಸ್ವಾಮಿ, ಐಕ್ಯುಎಸಿ ಸಂಯೋಜಕರಾದ ಡಾ. ಎನ್. ರಾಜೇಂದ್ರ ಪ್ರಸಾದ್, ಗ್ರಂಥಪಾಲಕರಾದ ಶ್ರೀಮತಿ ಎಸ್.ಸಿ. ಶೋಭಾ, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಂ. ಕಾರ್ತಿಕ್, ಪ್ರಾಧ್ಯಾಪಕರುಗಳಾದ ಡಾ. ವಿ. ವಿಜಯಮಂಜುನಾಥ್ ಗುರು, ಡಾ. ಎಂ.ಪಿ. ರಾಘವೇಂದ್ರ, ಪ್ರೊ. ಟಿ.ವಿ. ಲತಾ ಮತ್ತು ಹೆರ್‌ರೈಝನ್ ಟೆಕ್ನಾಲಜಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಟಿ.ಎಸ್. ಮಹೇಶ್ ಉಪಸ್ಥಿತರಿದ್ದರು. ಕು. ಸನ್ನಿಧಿ ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಡಾ. ಹೆಚ್.ಸಿ. ಹೊನ್ನಪ್ಪ ಸ್ವಾಗತಿಸಿದರು. ಡಾ. ಆರ್. ಸುಹಾಸ್ ನಿರೂಪಿಸಿದರು. ಡಾ. ಕುಮುದಿನಿ ಅಚ್ಚಿ ವಂದಿಸಿದರು.

## ಪೌಷ್ಠಿಕ ಆಹಾರ ಜೀವದ ರಕ್ಷಕ



ಕೊಳ್ಳೇಗಾಲದ ಜೆಎಸ್‌ಎಸ್ ನರ್ಸಿಂಗ್ ಶಾಲೆಯ ವತಿಯಿಂದ ತಿಮ್ಮರಾಜಿಪುರ ಗ್ರಾಮದಲ್ಲಿ ಆಯೋಜಿಸಿದ್ದ ಮಕ್ಕಳ ಅಪೌಷ್ಠಿಕತೆ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಶ್ರೀ ಕೆಂಪರಾಜು, ಶ್ರೀ ಸಿದ್ದಯ್ಯ, ಶ್ರೀ ಪಟ್ಟಯ್ಯ, ಶ್ರೀ ರಾಜಣ್ಣ, ಶ್ರೀ ಮಹದೇವ ಕು. ರಾಧ, ಶ್ರೀಮತಿ ಎಸ್.ಮಂಜುಳಾ ಮತ್ತು ಕು. ಬಿ.ಪಿ. ಕಾವ್ಯರವರುಗಳಿದ್ದಾರೆ

ಪೌಷ್ಠಿಕ ಆಹಾರ ಜೀವದ ರಕ್ಷಕ ಎಂದು ತಿಮ್ಮರಾಜಿಪುರ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಶ್ರೀ ಕೆಂಪರಾಜು ಹೇಳಿದರು.

ಕೊಳ್ಳೇಗಾಲದ ಜೆಎಸ್‌ಎಸ್ ನರ್ಸಿಂಗ್ ಶಾಲೆಯ ವತಿಯಿಂದ ದಿನಾಂಕ 20.3.2021ರಂದು ತಿಮ್ಮರಾಜಿಪುರ ಗ್ರಾಮದಲ್ಲಿ ಆಯೋಜಿಸಿದ್ದ ಮಕ್ಕಳ ಅಪೌಷ್ಠಿಕತೆ ಕುರಿತ

ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ನಾವು ಸೇವಿಸುವ ಆಹಾರ ಪದಾರ್ಥಗಳಲ್ಲಿ ಸೂಕ್ತ ಪ್ರಮಾಣದಲ್ಲಿ ಪೋಷಕಾಂಶಗಳು ಇಲ್ಲದಿದ್ದರೆ ದೇಹಕ್ಕೆ ಅಗತ್ಯವಾದ ಪೋಷಣೆ ದೊರೆಯದು. ಅಂತಹ ಸಮಯದಲ್ಲಿ ನಾನಾ ಬಗೆಯ ಅನಾರೋಗ್ಯ ಸಮಸ್ಯೆಗಳು ಪ್ರಚೋದನೆ ಪಡೆದುಕೊಳ್ಳುತ್ತವೆ. ಈ ಸಮಸ್ಯೆಯು ಮಕ್ಕಳಲ್ಲಿ ಕಾಣಿಸಿಕೊಂಡರೆ ಅವರ ಬೆಳವಣಿಗೆಯಲ್ಲಿ ಕೊರತೆ ಕಾಣಿಸಿಕೊಳ್ಳುವುದು. ಆದ್ದರಿಂದ ಎಲ್ಲಾ ಪೋಷಕರು ಜವಾಬ್ದಾರಿಯಿಂದ ಮಕ್ಕಳ ಪೌಷ್ಠಿಕಾಂಶದ ಬಗ್ಗೆ ಕಾಳಜಿ ವಹಿಸಬೇಕು ಎಂದು ತಿಳಿಸಿದರು.

ಅಂಗನವಾಡಿ ಶಿಕ್ಷಕರಾದ ಕು. ರಾಧಾ ಜಾಗತಿಕವಾಗಿ ಐದು ವರ್ಷದ ಒಳಗಿನ ಮಕ್ಕಳು ಅಪೌಷ್ಠಿಕತೆಯಿಂದ ಅನೇಕ ತೊಂದರೆಗಳಿಗೆ ಒಳಗಾಗುತ್ತಿದ್ದಾರೆ ಹಾಗೂ ಸಾವನ್ನಪ್ಪುತ್ತಿದ್ದಾರೆ. ಇದನ್ನು ಪೋಷಕರು ಅರಿತು ಮಕ್ಕಳು ಅಪೌಷ್ಠಿಕತೆಗೆ ಒಳಗಾಗದಂತೆ ನೋಡಿಕೊಳ್ಳಬೇಕೆಂದು ಹೇಳಿದರು.

ಪ್ರಥಮ ವರ್ಷದ ವಿದ್ಯಾರ್ಥಿಗಳು ಮಕ್ಕಳ ಅಪೌಷ್ಠಿಕತೆ ಕುರಿತು ಕಿರುನಾಟಕವನ್ನು ಪ್ರದರ್ಶಿಸಿದರು. ಕಾರ್ಯಕ್ರಮದ ಸಂಚಾಲಕರಾದ ಶ್ರೀ ಎಸ್. ಮಂಜುಳಾ ಹಾಗೂ ಕು. ಬಿ.ಪಿ. ಕಾವ್ಯರವರು ಭಾಗವಹಿಸಿದ್ದರು.

## ವಿಶ್ವ ಜಲ ದಿನ

### ಮಳೆ ನೀರು ಸಂಗ್ರಹಣೆಗೆ ಒತ್ತು ನೀಡಬೇಕು

ನೀರಿನ ಅಭಾವ ಉಂಟಾಗಲು ಮನುಷ್ಯನ ಸ್ವಾರ್ಥವೇ ಕಾರಣವಾಗಿದೆ. ನೀರಿನ ಸಂರಕ್ಷಣೆ, ದೇಶದ ಪ್ರತಿಯೊಬ್ಬರ ಹೊಣೆಯಾಗಿರುವುದಲ್ಲದೆ ಮಳೆ ನೀರು ಸಂಗ್ರಹಕ್ಕೆ ಒತ್ತು ನೀಡಬೇಕಾಗಿದೆ ಎಂದು ಭೂಗೋಳಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರು ಹಾಗೂ ಪರಿಸರ ಸಂರಕ್ಷಣಾ ಸಮಿತಿ ಸಂಚಾಲಕರಾದ ಶ್ರೀಮತಿ ಎ.ಎಸ್. ಸ್ಮಿತಾ ತಿಳಿಸಿದರು.

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 23.3.2021ರಂದು ರಾಷ್ಟ್ರೀಯ ಸೇವಾ ಯೋಜನೆ, ಐಕ್ಯೂಎಸಿ ಹಾಗೂ ಪರಿಸರ ಸಂರಕ್ಷಣಾ ಸಮಿತಿಗಳ ವತಿಯಿಂದ ವಿಶ್ವ ಜಲ ದಿನದ ಅಂಗವಾಗಿ ಆಯೋಜಿಸಿದ್ದ "ಸಸ್ಟೈನಬಲ್ ಮ್ಯಾನೇಜ್‌ಮೆಂಟ್ ಆಫ್ ಫ್ರೆಷ್‌ವಾಟರ್ ರಿಸೋರ್ಸಸ್" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡಿ ಮಾತನಾಡುತ್ತಾ ಭಾರತ ಅಂತರ್ಜಲ ಬಳಕೆಯಲ್ಲಿ ಮೊದಲ 10 ಸ್ಥಾನದಲ್ಲಿದ್ದು ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಅಂತರ್ಜಲವು 1000 ಅಡಿಗಳಷ್ಟು ಕೆಳಕ್ಕೆ ಕುಸಿದಿದೆ. ಕಾಡು ನಾಶವಾಗುತ್ತಿರುವ ಕಾರಣ ಬಿದ್ದ ಮಳೆನೀರು ಭೂಮಿಯಲ್ಲಿ ಇಂಗದೆ ಹರಿದು ಹೋಗುತ್ತಿರುವುದು ಅಂತರ್ಜಲ ಕುಸಿತಕ್ಕೆ ಕಾರಣವಾಗಿದೆ. ಬೇಸಿಗೆ ಕಾಲದಲ್ಲಿ ನೀರಿನ ಕೊರತೆ ಬಗ್ಗೆ ಚಿಂತಿಸುವ ನಾವು ಮಳೆಗಾಲದಲ್ಲಿ ಹರಿದು ಹೋಗುವ ನೀರಿನ ಬಗ್ಗೆ ಚಿಂತಿಸುವುದಿಲ್ಲ. ಹರಿದು ಹೋಗುವ ನೀರನ್ನು ಸಂರಕ್ಷಿಸಿ ಮುಂದಿನ ದಿನಗಳಿಗೆ ಹಿಡಿದಿಟ್ಟುಕೊಳ್ಳುವ ಅವಶ್ಯಕತೆ ತುಂಬಾ ಇದ್ದು, ಪ್ರತಿಯೊಂದು ಮನೆಯಲ್ಲೂ ಮಳೆಯ ನೀರು ಮನೆಯಿಂದಾಚೆ ಹರಿದು ಹೋಗಲು ಬಿಡದೆ ಮಳೆ ನೀರಿನ ಕೊಯ್ಲು ಪದ್ಧತಿ ಅನುಸರಿಸಿ ನೀರಿನ ಇಂಗುವಿಕೆಗೆ ವ್ಯವಸ್ಥೆ ಮಾಡಿ ಅಂತರ್ಜಲವನ್ನು ಹೆಚ್ಚಿಸಬೇಕಿದೆ. ನೀರಿನ ಉಪಯೋಗವನ್ನು ಅಗತ್ಯಕ್ಕೆ ತಕ್ಕಂತೆ ಮಾತ್ರ ಬಳಸಿ ಮುಂದಿನ ತಲೆಮಾರಿಗೆ ಕಾಯ್ದಿಟ್ಟುಕೊಳ್ಳಬೇಕೆಂದು ತಿಳಿಸಿದರು.

ಪ್ರಾಂಶುಪಾಲರಾದ ಪ್ರೊ. ಉಮೇಶ ಅಭಿವೃದ್ಧಿ ಹೆಸರಲ್ಲಿ ಅರಣ್ಯನಾಶ, ಗಣಿಗಾರಿಕೆ, ಕಾಂಕ್ರೀಟೀಕರಣ, ಕೆರೆಗಳ ಒತ್ತುವರಿ, ನದಿಗಳ ಒತ್ತುವರಿ ಮಿತಿ ಮೀರಿದೆ. ಇದರಿಂದ ವರ್ಷದಿಂದ ವರ್ಷಕ್ಕೆ ವರ್ಷಧಾರೆಯ ಪ್ರಮಾಣ ಇಳಿಮುಖವಾಗುತ್ತಿದೆ. ಮಳೆ ಬಂದರೂ ಅದು ಅಕಾಲ ಮಳೆಯಾಗಿರುತ್ತದೆ. ನೈಸರ್ಗಿಕವಾಗಿ ಸಿಗುತ್ತಿದ್ದ ನೀರು ಇಂದು ಬಾಟಲಿಯಲ್ಲಿ ಭದ್ರವಾಗುತ್ತಿದೆ. ಅದರ ಬೆಲೆಯೂ ದಿನೇ ದಿನೇ ಏರುತ್ತಿದೆ. ನೀರಿನ ಸಂರಕ್ಷಣೆಗೆ ಹಾಗು ಮಿತಬಳಕೆಗೆ ನಾವೆಲ್ಲರೂ ಕಂಕಣಬದ್ಧರಾಗಬೇಕು. ಈ ಹಿನ್ನೆಲೆಯಲ್ಲಿ ಜನ ಸಾಮಾನ್ಯರಿಗೆ ಇದರ ಬಗ್ಗೆ ಅರಿವು ಮೂಡಿಸಲು ಪ್ರತಿವರ್ಷ ಮಾರ್ಚ್ 22 ರಂದು ವಿಶ್ವ ಜಲ ದಿನವನ್ನಾಗಿ ಆಚರಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ರಾಷ್ಟ್ರೀಯ ಸೇವಾ ಯೋಜನಾ ಕಾರ್ಯಕ್ರಮಾಧಿಕಾರಿ ಪ್ರೊ. ಬಸವರಾಜು, ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಜಲಮೂಲಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ

ಜಲಮೂಲಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀ ಗುರುಸ್ವಾಮಿಯವರು ತಿಳಿಸಿದರು.

ಸುತ್ತೂರಿನ ಐಸಿಎಆರ್ ಜೆಎಸ್ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 22.3.2021 ರಂದು ವಿಶ್ವ ಜಲ ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ನಮ್ಮ ಪೂರ್ವಜರ ಕಾಲದಲ್ಲಿ ನಾವು ಕೆರೆ ಕಟ್ಟೆಗಳ ನೀರನ್ನು ಕುಡಿಯುತ್ತಿದ್ದರೂ ಯಾವುದೇ ರೋಗಗಳು ಬರುತ್ತಿರಲಿಲ್ಲ, ಆದರೆ ಇಂದು ಬಾಟಲ್ ನೀರನ್ನು ಕುಡಿಯುವುದರಿಂದ ಅನೇಕ ರೋಗಗಳು ಬರುತ್ತಿವೆ. ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳು ನೀರಿನ ಮಹತ್ವದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದರೂ ನಾವು ನೀರಿನ ಸಂರಕ್ಷಣೆಯಲ್ಲಿ ತೊಡಗಿಲ್ಲ, ಶುದ್ಧ ನೀರಿನ ಘಟಕಗಳಲ್ಲಿರುವ ನೀರು ಶುದ್ಧವೆಂದು ನಂಬುವುದು ಕಷ್ಟವಾಗಿದೆ ಎಂದರು.

ಸುತ್ತೂರಿನ ಜೆಎಸ್ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು ನೀರು ಎಂದರೆ ಬರೀ ಜಲ ಅಲ್ಲ, ಅದು ಜೀವ ಜಲ. ಭೂಮಿಯಲ್ಲಿ ಶೇ.70 ರಷ್ಟು ನೀರಿದ್ದರೆ, ನಮ್ಮ ದೇಹದಲ್ಲಿ ಶೇ. 60 ರಷ್ಟು ನೀರಿದೆ. ಕಿಡ್ನಿಯಲ್ಲಿ ಶೇ. 80 ರಷ್ಟು ಹಾಗೂ ಚರ್ಮದಲ್ಲಿ ಶೇ, 60 ರಷ್ಟು ನೀರಿದೆ. ದೇಹಕ್ಕೆ ನೀರಿನ ಕೊರತೆಯುಂಟಾದಾಗ ಮನುಷ್ಯನು ಅನಾರೋಗ್ಯಕ್ಕೆ ತುತ್ತಾಗುವನು. ಹುಟ್ಟಿನಿಂದ ಸಾಯುವವರೆಗೂ ನೀರು ಬೇಕು. 20 ವರ್ಷಗಳ ಹಿಂದೆ ಭೂಮಿ ರಾಸಾಯನಿಕಗಳಿಂದ ಮುಕ್ತವಾಗಿತ್ತು, ಆದರೆ ಇಂದು ಭೂಮಿ ರಾಸಾಯನಿಕಗಳಿಂದ ಕೂಡಿದ್ದು, ನೀರು ಹಾಗೂ ಭೂಮಿ ವಿಷಯುಕ್ತವಾಗಿದೆ. ಕೆರೆ ಕಟ್ಟೆಗಳ ನೀರು ವಿಷದ ನೀರಾಗಿದೆ. ಪವಿತ್ರ ಗಂಗಾ ನದಿಯ ನೀರು ಕಲುಷಿತವಾಗಿದೆ. ನದಿ ನೀರಿನಲ್ಲಿ ರಾಸಾಯನಿಕಗಳು ಸೇರುತ್ತಿವೆ. ಎಷ್ಟೋ ಹಳ್ಳಿ ಹಾಗೂ ನಗರಗಳ ಚರಂಡಿ ನೀರು ನದಿಗಳಿಗೆ ಸೇರುತ್ತಿದೆ. ನೀರಿನ ಬಗ್ಗೆ ಜಾಗೃತಿಯಿಲ್ಲ. ನಮ್ಮ ಹಿಂದಿನ ಪೀಳಿಗೆಯವರು ನೀರನ್ನು ಉಳಿಸಿದ್ದರಿಂದ ನಮಗೆ ನೀರಿನ ಜೊತೆ ಎಳನೀರು ಸಿಗುತ್ತಿದೆ. ಸದ್ಗುರು ಜಗ್ಗಿ ವಾಸುದೇವರವರು ಹೇಳಿದಂತೆ ನೀರು ಸರಕಲ್ಲ, ಇಂದಿನ ಪೀಳಿಗೆಯವರು ನೀರನ್ನು ರಕ್ಷಿಸಬೇಕಾಗಿದೆ. ಒಂದು ಲೀಟರ್ ಮಿನರಲ್ ನೀರು ತಯಾರಾಗಲು 3 ಲೀಟರ್ ನೀರು ಬೇಕಾಗುವುದು. ಒಂದು ವರ್ಷ ನಾವು ಮಿನರಲ್ ನೀರನ್ನು ಕುಡಿದರೆ ನಮಗೆ ಮೂಳೆ ರೋಗ, ಚರ್ಮ ರೋಗ ಹಾಗೂ ಇತರೆ ರೋಗಗಳು ಬರುತ್ತವೆ. ಈ ಮಿನರಲ್ ನೀರಿನಲ್ಲಿ ಖನಿಜಗಳು ಇರುವುದೇಯಿಲ್ಲ. ನಿಜವಾದ ಮಿನರಲ್ ನೀರು ಎಂದರೆ ಗುಡ್ಡಗಾಡು ಹಾಗೂ ನದಿಗಳ ನೀರು ಅದು ಖನಿಜಗಳನ್ನು ಹೊಂದಿರುತ್ತದೆ. ಇಂತಹ ಶುದ್ಧವಾದ ಕುಡಿಯುವ ನೀರನ್ನು ಹುಡುಕಿಕೊಂಡು ಹೋಗುವ ಪರಿಸ್ಥಿತಿ ಮುಂದಿನ ಜನಾಂಗದವರಿಗೆ ಬರದಂತೆ ನಾವು ಕೊಡುಗೆಯಾಗಿ ನೀರನ್ನು ಉಳಿಸಬೇಕಾಗಿದೆ. ಮಳೆ ನೀರು ಕೊಯ್ಲು ಬಗ್ಗೆ ಜಾಗೃತಿ ಮೂಡಿಸಬೇಕು. ನೀರಿನ ಮೂಲಗಳನ್ನು ಹಾಳು ಮಾಡಬಾರದು. ವಿಜ್ಞಾನಿಗಳು, ಸಂತರು ಹೇಳುವಂತೆ ವಿಶ್ವದಲ್ಲಿ ಮುಂದೊಂದು ದಿನ ವಿಶ್ವ ಯುದ್ಧ ಭೂಮಿಗಾಗಿ ನಡೆಯುವುದಿಲ್ಲ. ನೀರಿಗಾಗಿ ನಡೆಯುತ್ತದೆ. ನಾವು ಎಲ್ಲಿಯೇ ಹೋದರೂ ನೀರನ್ನು ರಕ್ಷಿಸಬೇಕು ಎಂದು ತಿಳಿಸಿದರು.

ಹಿರಿಯ ವಿಜ್ಞಾನಿಗಳಾದ ಶ್ರೀ ಮಂಜುನಾಥ ಅಂಗಡಿಯವರು ಅಧ್ಯಕ್ಷತೆ ವಹಿಸಿದ್ದರು. ವಿಜ್ಞಾನಿಗಳಾದ ಶ್ರೀಮತಿ ನೇತ್ರಾವತಿ ಎತ್ತಿನಮನಿ, ಶ್ರೀ ಶಾಮರಾಜ, ಶ್ರೀ ಜೆ.ಜಿ. ರಾಜಣ್ಣ, ಶ್ರೀ ಗಂಗಪ್ಪ ಹಿಪ್ಪರಗಿ, ಗೀಕಳ್ಳಿಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಟಿ.ಪಿ. ಚಿನ್ನಸ್ವಾಮಿ, ಗೀಕಳ್ಳಿಯ ಪ್ರಾಥಮಿಕ ಶಾಲೆಯ ಮಕ್ಕಳು, ಶಿಕ್ಷಕರು, ರೈತರು ಹಾಗೂ ಕೆವಿಕೆಯ ಸಿಬ್ಬಂದಿಗಳು ಭಾಗವಹಿಸಿದ್ದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಶ್ರೀ ಎಸ್. ಸತೀಶ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಹೆಚ್.ವಿ. ದಿವ್ಯಾ ನಿರೂಪಿಸಿದರು. ಶ್ರೀ ಜೆ.ಜಿ. ರಾಜಣ್ಣ ವಂದಿಸಿದರು.

□

## ಪಡೆದ ಶಿಕ್ಷಣವನ್ನು ಸಮಾಜದ ಒಳಿತಿಗೆ ಬಳಸಬೇಕು

ಪಡೆದ ಶಿಕ್ಷಣವನ್ನು ಸಮಾಜದ ಒಳಿತಿಗೆ ಬಳಸಬೇಕು ಎಂದು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಮನೋವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಎನ್. ರವೀಶ್‌ರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಎಸ್‌ಟಿಯು ಆವರಣದ ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ದಿನಾಂಕ 10.3.2021 ರಂದು ಏರ್ಪಡಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ ಘಟಕದ 2020-2021ನೇ ಸಾಲಿನ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ಮತ್ತು ನೂತನ ಸ್ವಯಂಸೇವಕರಿಗೆ ಸ್ವಾಗತ ಕಾರ್ಯಕ್ರಮದಲ್ಲಿ 'ವಿದ್ಯಾರ್ಥಿ ಮತ್ತು ಸಾಮಾಜಿಕ ಸಂಬಂಧ' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಶಿಕ್ಷಣವೆಂದರೆ ಬರಿ ವಿಷಯ ಸಂಗ್ರಹವಲ್ಲ. ಬದಲಿಗೆ ವಿಷಯವನ್ನು ಕಲಿತು ಸಮಾಜದ ಒಳಿತಿಗೆ ಅದನ್ನು ಬಳಸಬೇಕು. ಯುವಕ ಮತ್ತು ಯುವತಿಯರು ಈ ದೇಶದ ಆಸ್ತಿ, ಹಾಗಾಗಿ ನಿಸ್ವಾರ್ಥ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಅದೇ ರೀತಿ ವಿದ್ಯಾರ್ಥಿಗಳು ಮೊಬೈಲನ್ನು ಜ್ಞಾನಾರ್ಜನೆಗೆ ಮಾತ್ರ ಉಪಯೋಗಿಸಬೇಕು. ಇದೆಲ್ಲವನ್ನು ಸಾಧಿಸಬೇಕಾದರೆ ಮೊಟ್ಟ ಮೊದಲು ಮನಸ್ಸಿನ ಒತ್ತಡವನ್ನು ನಿವಾರಿಸಿಕೊಳ್ಳಬೇಕು. ಇದರಿಂದ ವಿದ್ಯಾರ್ಥಿಗಳು ತಮ್ಮ ಮಾನಸಿಕ ಆರೋಗ್ಯ ಮತ್ತು ಸಮತೋಲನ ಸಾಧಿಸಲು ಸಾಧ್ಯ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಶ್ರೀ ಜಿ. ರಾಮಲಿಂಗನಗೌಡ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ.ಬಿ. ಚಂದ್ರಶೇಖರಮೂರ್ತಿ ಪ್ರತಿಜ್ಞಾವಿಧಿ ಬೋಧಿಸಿದರು. ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಶ್ರೀ ಬಿ.ಎಸ್. ರಾಜಶೇಖರವರು ಉಪಸ್ಥಿತರಿದ್ದರು.

## ಶಿವಾನುಭವ ದಾಸೋಹ

### ಶರಣರು ಪ್ರಕೃತಿಯಲ್ಲಿ ಭಗವಂತನನ್ನು ಕಂಡವರು



ಮೈಸೂರು 2ನೇ ಹಂತದ ಜೆಎಸ್‌ಎಸ್ ಬಡಾವಣೆಯಲ್ಲಿ ನಡೆದ 275ನೆಯ 'ಶಿವಾನುಭವ ದಾಸೋಹ' ಕಾರ್ಯಕ್ರಮದಲ್ಲಿ 'ಅಕ್ಕನ ವಚನಗಳಲ್ಲಿ ಪ್ರಕೃತಿ ಸೌಂದರ್ಯ' ವಿಷಯ ಕುರಿತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾದ ಡಾ. ವಿಜಯಕುಮಾರಿ ಎಸ್. ಕರಿಕಲ್‌ರವರು ಉಪನ್ಯಾಸ ನೀಡಿದರು

ಶರಣರು ಪ್ರಕೃತಿಯಲ್ಲಿ ಭಗವಂತನನ್ನು ಕಂಡವರು ಎಂದು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾದ ಡಾ. ವಿಜಯಕುಮಾರಿ ಎಸ್. ಕರಿಕಲ್‌ರವರು ಹೇಳಿದರು.

ಮಾರ್ಚ್ 27ರಂದು ಮೈಸೂರು 2ನೇ ಹಂತದ ಜೆಎಸ್‌ಎಸ್ ಬಡಾವಣೆಯಲ್ಲಿ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಏರ್ಪಡಿಸಿದ್ದ 275ನೆಯ 'ಶಿವಾನುಭವ ದಾಸೋಹ' ಕಾರ್ಯಕ್ರಮದಲ್ಲಿ 'ಅಕ್ಕನ ವಚನಗಳಲ್ಲಿ ಪ್ರಕೃತಿ ಸೌಂದರ್ಯ' ವಿಷಯ ಕುರಿತು ಉಪನ್ಯಾಸ ನೀಡುತ್ತಾ, ವಚನ ಸಾಹಿತ್ಯದಲ್ಲಿ ಶರಣೆ ಎಂದಾಕ್ಷಣ ನೆನಪಾಗುವುದು ಅಕ್ಕಮಹಾದೇವಿಯವರು. ಅವರ ವಚನಗಳಲ್ಲಿ ಕಂಡುಬರುವ ಪ್ರಕೃತಿಯ ವರ್ಣನೆ ಅತ್ಯಂತ ಆಪ್ತವಾದುದು. ಮನುಷ್ಯರಿಗಿಂತ ಗಿಡ–ಮರ, ಪ್ರಾಣಿ–ಪಕ್ಷಿಗಳ ಕುರಿತು ಅಕ್ಕ ಹೊಂದಿರುವ ನಿಲುವನ್ನು ಗಮನಿಸಿದಾಗ ಅವರು ಸೃಷ್ಟಿಯಲ್ಲಿ ಭಗವಂತನ ದರ್ಶನವನ್ನು ಅನುಭವಿಸಿದ್ದು ತಿಳಿಯುತ್ತದೆ. ತಾವು ಕಂಡುಂಡ ಅನುಭವಗಳ ಜೊತೆಗೆ ಪ್ರಕೃತಿಯಲ್ಲಿನ ಸೌಂದರ್ಯವನ್ನು ಬೆಸೆದು ಹೇಳುವ ಕಲೆ ಅವರಿಗೆ ಸಿದ್ಧಿಸಿತ್ತು ಎಂದು ತಿಳಿಸಿದರು.

ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಲ್.ಆರ್. ಮಹದೇವಸ್ವಾಮಿಯವರು ಶಿವಾನುಭವ ದಾಸೋಹದಂತಹ ಕಾರ್ಯಕ್ರಮಗಳು ಜನರ ಜೀವನಕ್ಕೆ ಮಾರ್ಗದರ್ಶನ ಮಾಡುವಂಥವು. ಒತ್ತಡದ ಬದುಕನ್ನು ನಿವಾರಿಸಿಕೊಳ್ಳಲು ಅತ್ಯಂತ ಸಹಕಾರಿಯಾದವು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳು, 2ನೇ ಹಂತದ ಜೆಎಸ್‌ಎಸ್ ಬಡಾವಣೆಯ ನೂರಾರು ಕುಟುಂಬಗಳ ಸದಸ್ಯರು ಭಾಗವಹಿಸಿದ್ದರು. ಶ್ರೀ ಶಿವರಾತ್ರೀಶ್ವರ ಭಜನಾ ಮಂಡಳಿಯವರು ಭಜನೆ ಮಾಡಿದರು. ಕು. ಋತಿಕ ಮತ್ತು ಕು. ರುಚಿತ ಪ್ರಾರ್ಥಿಸಿದರು. ಶ್ರೀಮತಿ ಹೇಮಲತಾ ಪುಟ್ಟಸ್ವಾಮಿ ಸ್ವಾಗತಿಸಿದರು. ಶ್ರೀ ಮಾದಪ್ಪ ವಂದಿಸಿದರು. ಶ್ರೀ ಡಿ.ಎಂ. ಸಿದ್ಧಲಿಂಗಸ್ವಾಮಿ ಕಾರ್ಯಕ್ರಮ ನಿರ್ವಹಿಸಿದರು.

## ದಾರ್ಶನಿಕರ ಬದುಕು ಮತ್ತು ಸಂದೇಶ ಕುರಿತು ರಸಪ್ರಶ್ನೆ ಸ್ಪರ್ಧೆ



ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ಘಟಕ ಮತ್ತು ಕದಳಿ ಮಹಿಳಾ ವೇದಿಕೆ ವತಿಯಿಂದ ದಾರ್ಶನಿಕರ ಹಾಗೂ ಶರಣರ ಕುರಿತು ಏರ್ಪಡಿಸಿದ್ದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ವಿಜೇತರಾದ ವಿದ್ಯಾರ್ಥಿಗಳೊಂದಿಗೆ ಶ್ರೀಮತಿ ಸುಮಾ ಪ್ರಕಾಶ್, ಶ್ರೀಮತಿ ವಿಮಲಾ ಮೂರ್ತಿ, ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಶ್ರೀಮತಿ ಸುಧಾ ಮೃತ್ಯುಂಜಯಪ್ಪ, ಶ್ರೀ ಡಿ.ಎಸ್. ಸದಾಶಿವಮೂರ್ತಿ ಹಾಗೂ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಜಿ. ಶಿವಮಲ್ಲು ಹಾಗೂ ಶ್ರೀಮತಿ ಸಿ.ಪಿ. ನಿರ್ಮಲರವರಿದ್ದಾರೆ

ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ ಘಟಕದ ವತಿಯಿಂದ ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ದಿನಾಂಕ 31.3.2021ರಂದು ವಿದ್ಯಾರ್ಥಿಗಳಿಗೆ

"ದಾರ್ಶನಿಕರ ಬದುಕು ಮತ್ತು ಸಂದೇಶ" ಎಂಬ ವಿಷಯವನ್ನು ಕುರಿತು 'ರಸಪ್ರಶ್ನೆ ಸ್ಪರ್ಧೆ'ಯನ್ನು ಏರ್ಪಡಿಸಲಾಗಿತ್ತು.

ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು ಕಾರ್ಯಕ್ರಮವನ್ನು ಉದ್ಘಾಟಿಸಿ ದಾರ್ಶನಿಕರ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಇಂತಹ ಕಾರ್ಯಕ್ರಮಗಳು ಶಾಲಾಮಟ್ಟದಲ್ಲಿ ಪ್ರಮುಖವಾಗಿದ್ದು, ಶರಣರ ಮತ್ತು ದಾರ್ಶನಿಕರ ಚಿಂತನೆಗಳು, ತತ್ವಗಳು ವಿದ್ಯಾರ್ಥಿಗಳ ಮೇಲೆ ಪರಿಣಾಮವನ್ನು ಬೀರಿ ಉತ್ತಮ ಸಮಾಜವನ್ನು ನಿರ್ಮಿಸಲು ಸಹಕಾರವಾಗುತ್ತದೆ ಎಂದು ತಿಳಿಸಿದರು.

ನಿವೃತ್ತ ಪ್ರಾಧ್ಯಾಪಕರಾದ ಶ್ರೀ ಡಿ.ಎಸ್. ಸದಾಶಿವಮೂರ್ತಿಯವರು ದಾರ್ಶನಿಕರ ಬದುಕು ಮತ್ತು ವಿಚಾರಧಾರೆಗಳು ವಿದ್ಯಾರ್ಥಿಗಳ ಜೀವನಕ್ಕೆ ಅತ್ಯವಶ್ಯಕವಾಗಿದೆ. ಸರಳ ವಚನ, ತತ್ವಗಳನ್ನು ಪ್ರತಿನಿತ್ಯ ವಿದ್ಯಾರ್ಥಿಗಳು ಓದುವುದರ ಮೂಲಕ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಉತ್ತಮ ಪ್ರಜೆಯಾಗಿ ರೂಪುಗೊಳ್ಳುತ್ತಾರೆ ಎಂದು ಹೇಳಿದರು.

ಪೂಜ್ಯ ಶ್ರೀ ಜಡೆಮಹಾಂತ ಸ್ವಾಮಿಗಳ ದತ್ತಿ ಮತ್ತು ಪೂಜ್ಯ ಡಾ. ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳ ದತ್ತಿ ದಾನಿಗಳು ಹಾಗೂ ಕದಳಿ ಮಹಿಳಾ ವೇದಿಕೆಯ ಉಪಾಧ್ಯಕ್ಷರಾದ ಶ್ರೀಮತಿ ಸುಧಾ ಮೃತ್ಯುಂಜಯಪ್ಪ ರವರು ಸ್ಪರ್ಧೆಯನ್ನು ನಡೆಸಿಕೊಟ್ಟು ವಿಜೇತ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರವನ್ನು ವಿತರಿಸಿದರು.

ರಸಪ್ರಶ್ನೆ ಸ್ಪರ್ಧೆಯಲ್ಲಿ ಶಾಲೆಯ 6 ತಂಡಗಳು ಭಾಗವಹಿಸಿದ್ದವು. 9ನೇ ತರಗತಿಯ ವಿದ್ಯಾರ್ಥಿಗಳಾದ ಡಿ.ಎಂ. ರಕ್ಷಿತಾ, ಶುಭ ಪ್ರಥಮ, ಯಶ್ವಂತ್, ಹೆಚ್.ಎಂ. ಪುನೀತ್ ದ್ವಿತೀಯ, ಪ್ರವೀಣ್, ಸಿದ್ಧನಗೌಡ ತೃತೀಯ ಹಾಗೂ ಉಳಿದ ಮೂರು ತಂಡ ಸಮಾಧಾನಕರ ಸ್ಥಾನದೊಂದಿಗೆ ನಗದು ಪುರಸ್ಕಾರ ಹಾಗೂ ಪ್ರಶಸ್ತಿಪತ್ರ ಪಡೆದರು.

ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಶಾರದಾ ಶಿವಲಿಂಗಸ್ವಾಮಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ವೇದಿಕೆ ಸಮಿತಿಯ ಸದಸ್ಯರುಗಳು, ಶಾಲಾ ಮುಖ್ಯೋಪಾಧ್ಯಾಯರುಗಳಾದ ಶ್ರೀ ಜಿ. ಶಿವಮಲ್ಲು, ಶ್ರೀಮತಿ ಸಿ.ಪಿ. ನಿರ್ಮಲ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶಾಲಾ ಮಕ್ಕಳು ಪ್ರಾರ್ಥಿಸಿದರು. ಶ್ರೀ ಎಂ. ರಾಜಶೇಖರ್ ಸ್ವಾಗತಿಸಿದರು. ಶ್ರೀಮತಿ ಸುಮಾ ಪ್ರಕಾಶ್ ನಿರೂಪಿಸಿದರು. ಶ್ರೀಮತಿ ಗೀತಾ ಈಶ್ವರ್‌ರವರು ವಂದಿಸಿದರು.

## ರಾಜ್ಯಮಟ್ಟದ ಕರಾಟೆ ಚಾಂಪಿಯನ್‌ಷಿಪ್‌ನಲ್ಲಿ ದ್ವಿತೀಯ




ದಿನಾಂಕ 28.3.2021 ರಂದು ಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ ಕರಾಟೆ ಚಾಂಪಿಯನ್‌ಷಿಪ್‌ನಲ್ಲಿ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿ ಟಿ. ಆರ್. ಹೇಮಂತ್ ದ್ವಿತೀಯ ಸ್ಥಾನ ಪಡೆದು ಪ್ರಶಸ್ತಿಪತ್ರ ಮತ್ತು ಟ್ರೋಫಿ ಪಡೆದಿರುತ್ತಾರೆ.

## ರಕ್ತದಾನ ಶಿಬಿರ



ಕೊಳ್ಳೇಗಾಲದ ಜೆಎಸ್‌ಎಸ್ ನರ್ಸಿಂಗ್ ಶಾಲೆಯು ಎಸ್‌ಜೆಬಿ ಪ್ರತಿಷ್ಠಾನ, ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಹಾಗೂ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರ

ಕೊಳ್ಳೇಗಾಲದ ಜೆಎಸ್‌ಎಸ್ ನರ್ಸಿಂಗ್ ಶಾಲೆಯ ವತಿಯಿಂದ ಎಸ್‌ಜೆಬಿ ಪ್ರತಿಷ್ಠಾನ, ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಹಾಗೂ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 1.4.2021ರಂದು ಕೊಳ್ಳೇಗಾಲದ ಪತಂಜಲಿ ಯೋಗ ಮಂದಿರದ ಆವರಣದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಸಾರ್ವಜನಿಕರು ರಕ್ತದಾನಿಗಳು ಹಾಗೂ ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಸುಮಾರು 36 ಯುನಿಟ್‌ನಷ್ಟು ರಕ್ತದಾನ ನೆರವೇರಿರುತ್ತದೆ. ರಕ್ತದಾನಿಗಳಿಗೆ ಪ್ರಮಾಣಪತ್ರ, ಹಣ್ಣು ಮತ್ತು ಪಾನೀಯಗಳನ್ನು ನೀಡಿ ಗೌರವಿಸಲಾಯಿತು.

ಶಿಬಿರದಲ್ಲಿ ಪ್ರಾಂಶುಪಾಲರಾದ ಶ್ರೀ ಡಿ.ಜಿ. ವಿಷಕಂಠಮೂರ್ತಿ, ಎಸ್‌ಜೆಬಿ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಶಿವಕುಮಾರ್, ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಸದಸ್ಯರು ಹಾಗೂ ಚಾಮರಾಜನಗರದ ವೈದ್ಯಕೀಯ ವಿಜ್ಞಾನ ಸಂಸ್ಥೆಯ ವೈದ್ಯಕೀಯ ಸಿಬ್ಬಂದಿಗಳು ಭಾಗಿಯಾಗಿದ್ದರು.

## ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ 'ಸೆಂಟರ್ ಆಫ್ ಎಕ್ಸಲೆನ್ಸ್' ಸ್ಥಾಪನೆ

ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ದಿನಾಂಕ 18.3.2021ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಭಾರತೀಯ ರಬ್ಬರ್ ಸಂಸ್ಥೆಯ ಸಹಯೋಗದೊಂದಿಗೆ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ 'ಸೆಂಟರ್ ಆಫ್ ಎಕ್ಸಲೆನ್ಸ್' ಸ್ಥಾಪಿಸಲು ಒಡಂಬಡಿಕೆ ಮಾಡಿಕೊಳ್ಳಲಾಯಿತು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಹಾಗೂ ಐಆರ್‌ಐನ ಮೈಸೂರಿನ ಆಡಳಿತ ಸಮಿತಿ ಅಧ್ಯಕ್ಷರಾಗಿರುವ ಡಾ. ಆರ್. ಮುಖ್ಯೋಪಾಧ್ಯಾಯರವರು ಒಡಂಬಡಿಕೆಗೆ ಸಹಿ ಹಾಕಿ ವಿನಿಮಯ ಮಾಡಿಕೊಂಡರು.

ಇಂಡಿಯನ್ ರಬ್ಬರ್ ಇನ್ಸ್ಟಿಟ್ಯೂಟ್ ಭಾರತದಲ್ಲಿ ರಬ್ಬರ್ ಹಾಗೂ ಅದಕ್ಕೆ ಸಂಬಂಧಿಸಿದ ಕೈಗಾರಿಕೆಗಳ ಸಂಯೋಜಿತ ಇಂಜಿನಿಯರ್‌ಗಳು, ವಿಜ್ಞಾನಿಗಳು, ಶಿಕ್ಷಣತಜ್ಞರುಗಳನ್ನೊಳಗೊಂಡ ವೃತ್ತಿಪರ ಸಂಸ್ಥೆಯಾಗಿದೆ.

ಸೆಂಟರ್ ಆಫ್ ಎಕ್ಸಲೆನ್ಸ್ ಅನ್ನು ಸ್ಥಾಪಿಸಲು ಜೆಎಸ್‌ಎಸ್ ಮಹಾವಿದ್ಯಾಪೀಠವು 10000 ಚದರ ಅಡಿ ಜಾಗವನ್ನು ಐಆರ್‌ಐಗೆ ದೀರ್ಘಕಾಲದ ಅವಧಿಗೆ ಗುತ್ತಿಗೆಗೆ ನೀಡಿದೆ. ಈ ಸೆಂಟರ್ ಆಫ್ ಎಕ್ಸಲೆನ್ಸ್ 'ರಬ್ಬರ್ ವಿಜ್ಞಾನ ಮತ್ತು ತಂತ್ರಜ್ಞಾನ' ಕ್ಷೇತ್ರದ ಎಲ್ಲಾ ಆಯಾಮಗಳ ಜ್ಞಾನವನ್ನು ಪಸರಿಸುವ ರಾಷ್ಟ್ರೀಯ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ. ಈ ಸೆಂಟರ್‌ನಿಂದಾಗಿ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳು ದೊರೆಯಲಿವೆ. □

## ಬೆಳ್ಳಿ ಬೆಡಗು

### ಜೆಎಸ್‌ಎಸ್ ಪಬ್ಲಿಕ್ ಶಾಲೆ, ಜೆ.ಪಿ. ನಗರ, ಮೈಸೂರು



ಮೈಸೂರಿನ ಜೆ.ಪಿ. ನಗರದ ನಿವಾಸಿಗಳ ಪ್ರಾರ್ಥನೆಯ ಮೇರೆಗೆ, ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಕೃಪಾಶೀರ್ವಾದ ಹಾಗೂ ದೂರದರ್ಶಿತ್ವದ ಫಲವಾಗಿ, ಜೆ.ಪಿ. ನಗರದಲ್ಲಿ ಸಿಬಿಎಸ್‌ಇ ಪಠ್ಯಕ್ರಮ ಆಧಾರಿತ ಶಿಕ್ಷಣವನ್ನು ಮಕ್ಕಳಿಗೆ ದೊರಕಿಸುವ ಸಲುವಾಗಿ ಜೆಎಸ್‌ಎಸ್ ಪಬ್ಲಿಕ್ ಶಾಲೆಯು 1994ರಲ್ಲಿ ಸ್ಥಾಪಿತವಾಯಿತು.

47 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಶಾಲೆಯಲ್ಲಿ ಈಗ 900 ವಿದ್ಯಾರ್ಥಿಗಳಿದ್ದಾರೆ. 45ಕ್ಕೂ ಹೆಚ್ಚು ನುರಿತ ಕ್ರಿಯಾಶೀಲ ಶಿಕ್ಷಕರು ಹಾಗೂ 12ಕ್ಕೂ ಹೆಚ್ಚು ಬೋಧಕೇತರ ವರ್ಗದವರು ಶಾಲಾಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶಾಲೆಯಲ್ಲಿ ಉತ್ತಮವಾದ ತರಗತಿ ಕೊಠಡಿಗಳು, ಸುಸಜ್ಜಿತ ಗ್ರಂಥಾಲಯ, ಪ್ರಯೋಗಾಲಯ, ಪ್ರತ್ಯೇಕ ಕಂಪ್ಯೂಟರ್ ಲ್ಯಾಬ್, ವಿಶಾಲವಾದ ಆಟದ ಮೈದಾನ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಿದೆ. ಅಲ್ಲದೆ ಅನುಭವಿ ಶಿಕ್ಷಕರಿಂದ ಬೋಧನೆ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳು, ಹಾಗೂ ಸಾಂಸ್ಕೃತಿಕ ಚಟುವಟಿಕೆಯಲ್ಲಿ ತರಬೇತಿ, ಕ್ರೀಡಾ ತರಬೇತಿ, ಶಾಲಾ ಅವಧಿಯ ನಂತರ ಯೋಗ, ಕರಾಟೆ ಕಲಿಕೆಗೆ ಅವಕಾಶ ಕಲ್ಪಿಸಲಾಗಿದೆ. ಪಠ್ಯಕ್ರಮದ ಜೊತೆಗೆ ನೃತ್ಯ ಮತ್ತು ಸಂಗೀತ ಕಲಿಯಲು ವಿಶೇಷ ತರಗತಿಗಳ ವ್ಯವಸ್ಥೆಯಿದೆ. ವಿದ್ಯಾರ್ಥಿ ವೇತನದ ಸೌಲಭ್ಯವಿದೆ.

ಶಾಲೆಯು ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯುತ್ತಿರುವ ನಗರದ ಶಾಲೆಗಳಲ್ಲಿ ಮೊದಲ ಸಾಲಿನಲ್ಲಿದೆ.

ಶಾಲೆಯ ಕೈತೋಟ 'ಆಯುರ್‌ವನ' ದಲ್ಲಿ ಸುಮಾರು 150ಕ್ಕೂ ಹೆಚ್ಚು ಔಷಧೀಯ, ಹೂ ಗಿಡಗಳು ಹಾಗೂ ಹಣ್ಣಿನ ಗಿಡಗಳನ್ನು ಬೆಳೆಸಲಾಗುತ್ತಿದೆ.

2016–17 ರಿಂದ ಶಾಲೆಯಲ್ಲಿ "ಮಾನಸಧಾರ" ಅಂತರ ಶಾಲಾಮಟ್ಟದ ನೃತ್ಯ ಹಾಗೂ ಚರ್ಚಾ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ. ಮಕ್ಕಳು ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಲು ಶಾಲಾ ವಾರ್ಷಿಕ ಸಂಚಿಕೆಯಾದ 'ಸ್ಪಂದನ' ಸದಾ ಸ್ಪಂದಿಸುತ್ತಿದೆ.

ಶಾಲೆಯ ಪ್ರಾಂಶುಪಾಲರಾಗಿ ಶ್ರೀಮತಿ ಚಿನ್ಮಯಿ, ಶ್ರೀ ರಾಮ್‌ಪ್ರಸಾದ್, ಶ್ರೀ ಎಸ್. ಪರಮೇಶ್ವರಪ್ಪ, ಶ್ರೀ ಎಸ್.ಎಲ್. ನಾಗೇಂದ್ರ [ಪ್ರಭಾರ], ಶ್ರೀಮತಿ ಶೋಭನಾರವರು ಸೇವೆ ಸಲ್ಲಿಸಿದ್ದಾರೆ. 2020–21ನೇ ಸಾಲಿನಿಂದ ಶ್ರೀಮತಿ ಸ್ಮಿತಾ ಕುರುಪ್‌ರವರು ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಶ್ರೀಮತಿ ಸ್ಮಿತಾ ಕುರುಪ್‌ರವರು ಸಿಬಿಎಸ್‌ಇಯ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. ಅಲ್ಲದೆ ಇವರು 'ಕರ್ನಾಟಕ ನಾಯರ್ ಸೊಸೈಟಿ'ಯವರು ಏರ್ಪಡಿಸಿದ್ದ ಸಣ್ಣಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದುಕೊಂಡಿದ್ದಾರೆ.

ಶಾಲೆಯ ನೃತ್ಯ ಶಿಕ್ಷಕಿಯಾದ ಶ್ರೀಮತಿ ಟಿ.ಎಸ್. ಶ್ರೀಲಕ್ಷ್ಮೀಕುಮಾರ್ ಅವರು ಭರತನಾಟ್ಯ ವಿದ್ವತ್ ಪದವೀಧರರು. ಪ್ರಸಿದ್ಧ ನೃತ್ಯಗಾರ್ತಿ. ಒಡಿಸ್ಸಿ, ಮಣಿಪುರಿ, ಮೋಹಿನಿಯಾಟ್ಟಂ, ಕಥಕ್ ಶೈಲಿಯ ನೃತ್ಯಗಳು ಹಾಗೂ ಯೋಗಾಭ್ಯಾಸದ ಶಿಕ್ಷಣವನ್ನೂ ಪಡೆದಿದ್ದಾರೆ. ವಿದೇಶದಲ್ಲೂ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಇವರನ್ನು ಹಲವಾರು ಮಠ–ಪೀಠಗಳು, ಸಂಘಸಂಸ್ಥೆಗಳು ಗುರುತಿಸಿ,ಗೌರವಿಸಿ ಸನ್ಮಾನಿಸಿವೆ.

ಕನ್ನಡ ಶಿಕ್ಷಕಿಯಾಗಿರುವ ಶ್ರೀಮತಿ ಎಸ್. ಲತಾ ಸುಬ್ಬಣ್ಣನವರು "ಗುರುಭೂಷಣ ಪ್ರಶಸ್ತಿ"ಗೆ ಭಾಜನರಾಗಿದ್ದಾರೆ.

ಬಹುಮುಖ ಪ್ರತಿಭೆಯ ಶಿಕ್ಷಕರಾದ ಶ್ರೀ ರೇವಣ್ಣನವರು, ಸಂಪನ್ಮೂಲ ವ್ಯಕ್ತಿಯಾಗಿ, ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವುದರೊಂದಿಗೆ ದಸರಾ ಸ್ತಬ್ಧ ಚಿತ್ರಗಳನ್ನು ರೂಪಿಸುವ ಕಲೆಯನ್ನೂ ಕರಗತಮಾಡಿಕೊಂಡಿದ್ದಾರೆ.

ಶಾಲೆಯಲ್ಲಿ ಓದಿದ ಅನೇಕ ಹಿರಿಯ ವಿದ್ಯಾರ್ಥಿಗಳು ಕ್ರೀಡೆ, ನೃತ್ಯ, ಸಂಗೀತ, ಅಲ್ಲದೆ ವೈದ್ಯಕೀಯ, ತಾಂತ್ರಿಕ, ಮತ್ತು ದೇಶ ರಕ್ಷಣಾ ಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಅವರಲ್ಲಿ ಆಯ್ದ ಕೆಲವರ ಸಾಧನೆಯನ್ನು ಇಲ್ಲಿ ತಿಳಿಸಲಾಗಿದೆ.

ಟೇಬಲ್ ಟೆನ್ನಿಸ್ ಪಟು ಶ್ರೀ ಕಿರಣ್ ಸಿಬಿಎಸ್‌ಇ ಜೋನರ್ಸ್‌ನಲ್ಲಿ ಭಾಗವಹಿಸಿ ಚಿನ್ನದ ಪದಕ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ರಾಜ್ಯ ಮತ್ತು ರಾಷ್ಟ್ರಮಟ್ಟದ ಸ್ಕೇಟರ್ ವಿ. ವರ್ಷಿತ್, ಸಿಬಿಎಸ್‌ಇಯುವರು ಆಯೋಜಿಸಿದ್ದ ಸ್ಕೇಟಿಂಗ್ ಪಂದ್ಯದಲ್ಲಿ ಮೂರು ಬಾರಿ 'ದಕ್ಷಿಣ ವಲಯದ ಚಾಂಪಿಯನ್' ಗೌರವ ಪಡೆದಿದ್ದಾರೆ. ಬೆಳ್ಳಿ ಪದಕ ಗಳಿಸುವ ಮೂಲಕ ರಾಜ್ಯಮಟ್ಟದ ವೈಯುಕ್ತಿಕ ಚಾಂಪಿಯನ್ ಆಗಿರುತ್ತಾರೆ.

ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಗಮಕದಲ್ಲಿ ತನ್ನ ಛಾಪನ್ನು ಮೂಡಿಸಿರುವ ಕೆ. ಶಾರೀಕ ಒಡಿಸ್ಸಿ, ಮಣಿಪುರಿ, ಕಥಕ್ ನೃತ್ಯ ಪ್ರಕಾರಗಳಲ್ಲಿಯೂ ತರಬೇತಿ ಹೊಂದಿದ್ದಾಳೆ. ನವದೆಹಲಿಯಲ್ಲಿ ಆಯೋಜಿಸಿದ್ದ ವಿಶ್ವ ಸಾಂಸ್ಕೃತಿಕ ಹಬ್ಬ, ಹಾಗೂ 'ಗಿನ್ನಿಸ್ ವರ್ಲ್ಡ್ ರೆಕಾರ್ಡ್' ಮತ್ತು 'ಲಿಮ್ಕ ಬುಕ್ ಆಫ್ ರೆಕಾರ್ಡ್'ನಲ್ಲಿ ದಾಖಲಾದ ಕೂಚುಪುಡಿ ತರಂಗಂ 'ಲಾರ್ಜೆಸ್ಟ್ ತರಂಗಂ ಡ್ಯಾನ್ಸ್' ನೃತ್ಯದಲ್ಲಿ ಭಾಗವಹಿಸಿದ್ದಾರೆ. ಸುತ್ತೂರು ಜಾತ್ರೆಯ ಶಾಸ್ತ್ರೀಯ ಭರತನಾಟ್ಯ ಸ್ಪರ್ಧೆಯ ವೈಯಕ್ತಿಕ ವಿಭಾಗದಲ್ಲಿ ಸತತ 5 ವರ್ಷ ಪ್ರಥಮ ಬಹುಮಾನ ಪಡೆದಿರುವುದಲ್ಲದೆ ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿದ್ದಾಳೆ.

'ಶಾಸ್ತ್ರೀಯ ನೃತ್ಯದಲ್ಲಿ ಅಸಾಧರಣ ಸಾಧನೆ'ಗಾಗಿ ತನುಶ್ರೀ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಜಿಟಿವಿ ಸರಿಗಮಪ ಲಿಟಲ್ ಚಾಂಪ್ಸ್‌ನ ಅಂತಿಮ ಐದು ಸ್ಪರ್ಧಿಗಳಲ್ಲಿ ಶಾಲೆಯ ಟಿ.ಎಂ. ವೈಷ್ಣವಿ ಒಬ್ಬಳಾಗಿದ್ದಳು ಹಾಗೂ ಈ ಟಿ.ವಿ. ಕನ್ನಡ ವಾಹಿನಿಯ 'ಎದೆ ತುಂಬಿ ಹಾಡಿದೆನು' ಕಾರ್ಯಕ್ರಮದಲ್ಲೂ ಭಾಗವಹಿಸಿದ್ದಾಳೆ.

ತಬಲ ವಾದಕನಾದ ರೋಹಿತ್ ಕಶ್ಯಪ್ ಮೈಸೂರಿನ ಅರಮನೆ ಹಾಗೂ ಹಲವಾರು ವೇದಿಕೆಗಳಲ್ಲಿ ತನ್ನ ಗುರುಗಳೊಂದಿಗೆ ಕಾರ್ಯಕ್ರಮ ನೀಡಿರುತ್ತಾನೆ.

ವಿದ್ಯಾರ್ಥಿನಿ ಹರ್ಷಿತ, 200 ಮತ್ತು 400 ಮೀಟರ್ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೇಟಿಕ್ ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕ, ಉಡುಪಿಯಲ್ಲಿ ನಡೆದ ರಾಜ್ಯಮಟ್ಟದ 200 ಮೀಟರ್ ಓಟದ ಸ್ಪರ್ಧೆಯಲ್ಲಿ ಬೆಳ್ಳಿ ಪದಕ, ಶಿಕಾರಿಪುರ ಮತ್ತು ಮೂಡಬಿದಿರೆಯಲ್ಲಿ ನಡೆದ ಓಟದ ಸ್ಪರ್ಧೆಯಲ್ಲಿ ಚಿನ್ನ ಹಾಗೂ ಕಂಚಿನ ಪದಕ ಗೆದ್ದಿದ್ದಾಳೆ.

ವಿದ್ಯಾರ್ಥಿ ಸುಘೋಷ್ ಆರ್. ಜೋಶಿ ಚಕ್ರ ಎಸೆತ ಸ್ಪರ್ಧೆಯಲ್ಲಿ ಕಂಚಿನ ಪದಕ, ಸಿಬಿಎಸ್‌ಇ ಕ್ಲಸ್ಟರ್ ಮಟ್ಟದ ಅಥ್ಲೆಟಿಕ್ ಮೀಟ್‌ನಲ್ಲಿ ಬೆಳ್ಳಿ ಪದಕ, ಮತ್ತು ಚತ್ತೀಸ್‌ಗಡದಲ್ಲಿ ನಡೆದ ಸಿಬಿಎಸ್‌ಇ ನ್ಯಾಷನಲ್ ಮಟ್ಟದ ಅಥ್ಲೆಟಿಕ್ ಮೀಟ್‌ನಲ್ಲಿ ಭಾಗವಹಿಸಿರುತ್ತಾನೆ.

ಶ್ರೀ ಸಿದ್ದೇಶ್ವರ ಮಹಾಸ್ವಾಮೀಜಿ, ಶ್ರೀ ಎಂ.ಎ. ಬೋಪಣ್ಣ, ಶ್ರೀ ಬಸವರಾಜ ಮಾಲಗತ್ತಿ, ಡಾ. ವಸುಂಧರಾ ದೊರೆಸ್ವಾಮಿ, ಶ್ರೀ ರಾಜಶೇಖರ ಕೋಟಿ, ಕರ್ನಲ್ ಎಂ.ಪಿ. ಅರವಿಂದ್, ಡಾ. ಸಿ.ಡಿ. ಪ್ರಸಾದ್, ಡಾ. ಗುರುರಾಜ ಕರ್ಜಗಿ, ಡಾ. ಆರ್.ಪಿ. ಶರ್ಮ, ಡಾ. ಶ್ಯಾಮಲಾ, ಶ್ರೀ ಗೊ.ರು. ಚೆನ್ನಬಸಪ್ಪ, ಶ್ರೀ ರಾಜದೀಪ್‌ಮನ್ವಾನಿ ಮುಂತಾದವರೆಲ್ಲಾ ಶಾಲೆಯ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದಾಗ ಶಾಲೆಯ ಅಭಿವೃದ್ಧಿ ಚಟುವಟಿಕೆಗಳನ್ನು ಕಂಡು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಶಾಲೆಯು ಅಮರಕಲಾ ಸಂಘ, ಪೋದಾರ್ ಇಂಟರ್ ನ್ಯಾಷನಲ್ ಸ್ಕೂಲ್‌ನ ಸಾಂಸ್ಕೃತಿಕ ಕಾರ್ಯಕ್ರಮ, ಸಚ್ಚಿದಾನಂದಾಶ್ರಮದ ಭಜನಾ ಸ್ಪರ್ಧೆ ಹಾಗೂ ವಿವಿಧ ಚರ್ಚಾಸ್ಪರ್ಧೆಗಳಲ್ಲಿ ಪಾರಿತೋಷಕಗಳನ್ನು ಪಡೆದುಕೊಂಡಿದೆ. ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ಆಯೋಜಿಸಿದ್ದ ತರಂಗಂ ನೃತ್ಯದಲ್ಲಿ 'ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್' ದಾಖಲೆ ಮಾಡಿದೆ. ಟೈಮ್ಸ್ ಆಫ್ ಇಂಡಿಯಾದವರು ನಡೆಸಿದ ಸಾಂಸ್ಕೃತಿಕ ಸ್ಪರ್ಧೆಯಲ್ಲಿಯೂ ಪ್ರಶಸ್ತಿ ಸಂದಿದೆ. ಸುತ್ತೂರು ಜಾತ್ರೆಯ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ಪ್ರತಿ ವರ್ಷವೂ ಶಾಲೆಯು ಪರ್ಯಾಯ ಪಾರಿತೋಷಕ ಪಡೆದುಕೊಳ್ಳುತ್ತಿದೆ.

ಒಟ್ಟಾರೆಯಾಗಿ ಶಾಲೆಯು ಉತ್ತಮ ಪ್ರಜೆಗಳ ನಿರ್ಮಾಣದ ಪಥದಲ್ಲಿ ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತಿದೆ. ಅಲ್ಲದೆ ಸಾಂದರ್ಭಿಕ ಜಾಗೃತಿ ಜಾಥಾಗಳನ್ನು ಆಯೋಜಿಸುವ ಮೂಲಕ ಜೆ.ಪಿ.ನಗರ ನಿವಾಸಿಗಳ ಪ್ರಶಂಸೆಗೂ ಪಾತ್ರವಾಗಿದೆ.

□

## ಮೈಸೂರಿನ ಸುತ್ತೂರು ಶ್ರೀಮಠಕ್ಕೆ ಮುಖ್ಯ ನ್ಯಾಯಮೂರ್ತಿಗಳ ಭೇಟಿ

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶ್ರೀಮಠಕ್ಕೆ ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಗೌ.ನ್ಯಾ. ಶ್ರೀ ಶರತ್ ಅರವಿಂದ್ ಬೊಬ್ಡೆಯವರು ದಿನಾಂಕ 20.2.2021ರಂದು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. ಅವರು ಶ್ರೀಗಳವರೊಡನೆ ಕೆಲವು ಸಮಯ ಸಮಾಲೋಚನೆ ನಡೆಸಿದರು. ಶ್ರೀಮಠ ಹಾಗೂ ಸಂಸ್ಥೆಯ ಸೇವಾಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿರುವ ಬಗ್ಗೆ ಕಳಕಳಿ ವ್ಯಕ್ತಪಡಿಸಿದರು. ಪೂಜ್ಯರು ಅವರನ್ನು ಗೌರವಿಸಿ, ಸನ್ಮಾನಿಸಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಗಣ್ಯರು, ಮಹಾವಿದ್ಯಾಪೀಠದ ಅಧಿಕಾರಿಗಳು ಉಪಸ್ಥಿತರಿದ್ದರು.

## JSS AHER

### National Oral Pathology Day



The 2nd National Oral Pathology Day was observed by Department of Oral Pathology & Microbiology on 3.3.2021. Dr. S. Balasubramanian, Dean and Director (Research), JSS AHER. Dr. S. Ravindra, Principal, JSS DC&H and Dr. Usha Hegde, Professor and Head, Department of Oral Pathology & Microbiology were present. Dr. Balasubramanian emphasised the significance of Oral Pathology in disease-diagnosis. Various competitions were held to explore the talents among the students. The toppers for academic excellence and winners of the competitions were awarded.

The Dept of Conservative Dentistry & Endodontics JSSDCH conducted the Cons Endo Day in the college on 6.3.2021. Dr. P.A. Kushalappa, Director ( Academics), JSSAHER was the chief guest, Dr. S. Ravindr, Principal was the guest of honour at the function. Dr. B.M. Annapoorna, HOD of Conservative Dentistry and Endodontics welcomed the dignitaries and audience. Essay competition, Endo Logo Designing and were conducted and prizes were distributed for the winners. Student from II BDS and IV BDS who secured highest marks in the annual exam in Conservative Dentistry and Endodontics

Subjects were awarded with cash prize. Guest lecture was given by Dr. Sunil Tejaswi, Reader, Dept. of Conservative Dentistry and Endodontics. Cultural program was also conducted. The program was concluded with the national anthem.

Quiz was conducted by Dr. U.K. Ambikathanaya and Endo Logo Design by Dr. H.K. Sowmya.

## International Women's Day

The College proudly celebrated the International Women's Day on 8.3.2021. Dr. C.P. Kathyayani, Lecturer, Dept of Prosthodontics and Crown & Bridge was honored as "Woman of Service" for her contribution as an academician.

The program was graced by Dr. P.A. Kushalappa, Director (Academics), JSSAHER, Dr. S. Ravindra, Prinicpal, Dr. Preeti Kore, Professor and Head Dept. of Conservative Dentistry and Endodontics, KLE VK Dental Sciences and Smt Shakuntala Venugopal, Counsellor. Dr. Aruna, Secretary of the Cultrual Committee and her team presented various recreational events during the program. Music Band "The Friction" also set the fire with their power- packed performance at the event.

## Personality Development

A two - day training programme on Personality Development was held on 17th - 18th of March 2021 for the administrative staff of the college.

Dr. S. Ravindra, Principal, JSS Dental College & Hospital graced the event as the chief guest and inaugurated the programme along with the guest speakers.

Resource Persons delivered the guest lecture on the following topics:

Dr. P. Nagesh, Prof., & Dean, Management studies, JSS Science and Technology University, Mysuru (Introduction and Brain Storming) ;

Dr. Sindhu Bharath, HR Faculty, JSS Science and Technology University, Mysuru (Quality Management) ; and

Dr. Sridevi Kulenur, Associate Prof., SJCE, JSS Science and Technology University, Mysuru. (Values, Attitude and Ethics)

On the 2nd day, following lectures are delivered Dr. Sindhu Bharath, HR Faculty, JSS Science and Technology University, Mysuru, she delivered (Interpersonal Skills) ;

Dr. P. Nagesh, Prof., & Dean, Management studies, JSS Science and Technology University, Mysuru. (Communication Skills)

Activities were given to staff to test their interpersonal and communication skills.

Total of 25 staff members attended the programme. Certificates were given to the participants.

Danta Manthana Conference for Dentists was organized by Government of Karnataka, Health and family Welfare Department on 19th and 20th March 2021 at Mysuru. Dr. B. Nandlal was the Chief Guest of the programme. Faculties Dr. Satish, Reader, Dr. Chandan, Reader, Dept of Oral & Maxillofacial Surgery, delivered a lecture on "Infection Control in Dental Practice during COVID - 19 Senario and clinical tips and tricks of local anaesthesia and exodontias, respectively. On 20.3.2021 Dr. K.S. Nagesh, Adjunct Faculty, JSS AHER delivered a keynote address on "World Oral Health Day'.

A screening camp was carried out at JSS Public School, Suttur on 20th March 2021. 48 school children of class 9 were screened for any oral health problems and advised and referred for dental treatments.The participants were addressed by Dr.Chandrashekar BR, Vice Principal regarding oral hygiene instructions, importance of oral health and significance of world oral health day.

On this occasion drawing competition was also conducted for the students with the topic importance and maintenance of oral health. Three best drawings were awarded. Among the children who were screened three children with the best oral health were awarded. Participation certificate was given to all children who participated in the competitions.

### Anti Ragging Awareness

Dr. B.S. Suresh, Principal, Subbaiah College of Dental Sciences & Dental Council Member, Shivamogga delivered a talk on 9.3.2021, about ragging and its implications. Around 105 students from II & III year attended the programme.

Anti Ragging Awareness Programme for the final year students and interns was held on 17.3.2021. Dr. H.V. Chandrakanth, Professor & Head, Dept. of Forensic Medicine delivered the lecture and also had an interactive session with the students. Vote of thanks was delivered by Dr. Nitin V. Muralidhar, Reader, Dept of Orthodontics, JSS DC & H. Dr. S. Ravindra, Principal, JSSDC & H graced the occasion as the Chief Guest.

### Masterclass 2021: A Practical Approach

A Practical Approach by the Karnataka State Branch of IPS, was jointly organised by the JSS Dental College and Hospital, constituent college of JSSAHER, Mysuru. The uniqueness of this Masterclass was in the fact that it worked towards strengthening the practical

knowledge and comprehensive skillset of the students for their final Prosthodontic degree master examination.

The programme took place for 2 days on 16th-17th March 2021. There was a total of 12 KSDC credit points to the participants. There were over 325 registrants, both PG students, from different parts of the country.

### Faculty Achievements

Dr. B.S. Avinash, Reader, Department of Periodontology was invited to speak at the 19th Annual Academy Meeting of Pan-PackficImplantology Society. It was a virtual conference held on 13.3.2021, and was organized by Taiwan Academy of Implant Dentistry. Dr. Avinash spoke on the topic "Soft Tissue Augmentation Around Dental Implants".

Dr. Vinutha Manjunath, Reader, Dept. of Conservative Dentistry and Endodontics delivered a Guest Lecture on "Demystifying Occlusion" at the ACPM Dental college Dhule, Maharashtra on 14.3.2021.

### Students Achievements

JSSDCH students participated in the 108th birthday celebration of Hindustani Vocalist Dr. Gangubai Hanagal on 4.3.2021, organized by Gangubai Hanagal music University, Mysore.

□

## Consultative Workshop on "Agricultural Water Use Management, Law and Policy in India"

JSS Law College (Autonomous), Mysuru, in association with the Centre for Environmental Law, Education, Research and Advocacy, National Law School of India University Bengaluru, in Collaboration with Indian Institute of Water Management, Bhubaneswar, Indian Council of Agricultural Research organised a Consultative Workshop on "Agricultural Water Use Management, Law and Policy in India" on 24.3.2021 the event was co-ordinated by Dr. S. Nataraju, Principal and assisted by Smt. Sheela Ganesh, Assistant Professor and held at Silver Jubilee Hall of the College.

Prof. M.K. Ramesh, Professor of Law, NLSIU, Bengaluru was the Chief Guest. The workshop was presided over by Prof. Morabada Mallikarjuna, Director, College Education Division, JSS Mahavidyapeetha. Dr. Sairam Bhat, Professor of Law and Co-ordinator, CEERA, NLSIU, Bengaluru, Dr.



S. Nataraju, Principal, CEERA Team, Resource Persons, faculty from JSS institutions and other colleges in Mysuru, progressive farmers, NGOs and other stakeholders were present. There were nearly 90 participants to the workshop.

The programme began with an invocation song by Miss Prajna, Dr. S. Nataraju, Principal gave the Welcome Address. The programme was inaugurated by watering the plants by Chief Guest and other dignitaries on the dias.

Prof. Sairam Bhat, Professor of Law and Coordinator - CEERA, NLSIU, Bengaluru briefed about the Consultative Workshop and made an explicit observation about the purpose of the programme. He remarked that though the country has seen many reforms including land reforms, electricity reforms, other sectors including water sector are not properly looked into this workshop was intended to cover various stakeholders of the agricultural field and discuss topics pertaining to agricultural policy and the law in India, he said.

Prof. M.K Ramesh, Professor of Law, NLSIU in his keynote address, remarked that, knowledge about the water law and agriculture is indispensable and imperative to help the farming community. Especially, in a country like India, the policy- makers must ensure Minimum Support Price for the crops and a meticulous implementation of Swaminathan Committee's Report, he opined.

Prof. Morabada Mallikarjuna, in his Presidential remarked that agriculture is a civilized activity, there is a close affinity between water and agriculture. The very evolution of civilization is identified on the banks of the rivers. Water is both natural and national resources and it is a wealth he added.

Chief Guest and other dignitaries were facilitated, Smt. Sheela Ganesh, Assistant Co-ordinator rendered vote of thanks. Smt. P. Ashwini compered the programme.

The three Technical Sessions that were Agricultural Policy and Law in India Dr. A.S. Kumara Swamy, Agricultural Scientist, Mysuru. Consultative Debate on Sustainable Agricultural Practice / Role of Centre and State in Water Governance" by Dr. K.R. Raveendra, Retired Assistant Director, Department of Agriculture, Government of Karnataka and "Water Law: A Critical Appraisal" by Ms. Madhubanti Sadhya, Teaching Associate.

The Workshop concluded with the Vote of thanks by Smt. Sheela Ganesh, Assistant Co-ordinator, followed by distribution of certificates and lunch for the participants of the workshop.

## International Webinars



Department of Electronics and Instrumentation, Sri Jayachamarajendra College of Engineering and JSS Science & Technology University, Mysuru organized International Webinars to provide exposure to students on industry trends, knowledge of latest technologies, industry requirements and interdisciplinary aspects in India and abroad. The event was held under TEQIP-III, National Project

